www.divinegen.org
www.dgmbethelchurch.org

# ದೇವರ ಸ್ವರ

ದೇವ ಜನರಿಂದ ... ದೇವ ಜನರಿಗಾಗಿ

ಸಂಪುಟ - 9 ಸಂಚಿಕೆ - 10 ಅಕ್ಟೋಬರ್ 2013
Volume : IX Issue : X October 2013

Editor, Publisher, Printer
& Owned by :
**Sunil John D'souza**
S/o Sri Joseph D'souza
Bethel Faith Home
Yesupura, Innanje Village,
Shankarpura, **Udupi**


Printed at :
**Prakash Offset Printers,**
Plot No. 164, Industrial Area,
Baikampady,
**Mangalore - 575003.**

Published at :
**Divine Generation Ministries**
Bethel Church Trust,
Bethel Church Road,
Yesupura, Innanje Village,
Shankarpura Post,
Udupi - 574 115.

## ಒಳ ಪುಟಗಳಲ್ಲಿ

1. ಪ್ರಕಟಣೆ
2. ಭಕ್ತರ ಹೇಳಿಕೆಗಳು
3. ವಯಸ್ಕರ ಸ್ವರ
4. ಜ್ಞಾಪಿಸಿಕೋ
5. ಪ್ರಾರ್ಥನಾ ಮನವಿಗಳು
6. ಕಿಸ್ತನ ಪ್ರಕಾಶವನ್ನು ಹೊಂದಿಕೋ
7. ಅನಾಥರ ಸ್ವರ
8. ನೀತಿವಂತನ ಆಶೀರ್ವಾದಗಳು
9. ಸ್ಥಳೀಯ ಮತ್ತು ವಿದೇಶ ಸುದ್ಧಿ
10. ಪ್ರಾರ್ಥನಾ ಸ್ವರ
11. ಮಹಿಳೆಯರ ಸ್ವರ
12. ಆರೋಗ್ಯ ಸ್ವರ
13. ಜಾಹೀರಾತು
14. ಮಕ್ಕಳ ಸ್ವರ

## ಸಂಪಾದಕರ ಲೇಖನಿಯಿಂದ . . .



ಕರ್ತನಾದ ಯೇಸುಕ್ರಿಸ್ತನ ಹೆಸರಿನಲ್ಲಿ ಪ್ರಿಯ ವಾಚಕರೆಲ್ಲರಿಗೂ ನನ್ನ ಆತ್ಮೀಯ ವಂದನೆಗಳು.

ಅದ್ಭುತವಾದ ರೀತಿಯಲ್ಲಿ ದೇವರು ನಮ್ಮನ್ನು ನಡೆಸುತ್ತಿರುವುದಕ್ಕಾಗಿ ಸಂತೋಷದಿಂದ ತಮ್ಮೆಲ್ಲರಿಗೂ ತಿಳಿಸಲು ಇಷ್ಟಪಡುತ್ತಿದ್ದೇನೆ. ದೇವರ ಸ್ವರ ಮಾಸ ಪತ್ರಿಕೆಯ ಮೂಲಕ ತಮ್ಮನ್ನು ಆಶೀರ್ವಾದ ಮಾಡಿದಾಗಿ ಅನೇಕ ಜನರು ನಮಗೆ ಮುಖತವಾಗಿ ಹಾಗೂ ಫೋನ್ ಕರೆಯ ಮೂಲಕವಾಗಿ ತಿಳಿಸಿರುತ್ತಾರೆ. ನಮಗೆ ಸಂತೋಷ ಏನೆಂದರೆ ಮಾಸ ಪ್ರತಿಕೆಯ ಮೂಲಕ ಫಲ ಕಾಣುತ್ತಿದ್ದೇವೆಂಬುದಾಗಿ. **"ಬದುಕಿಸುವಂಥದು ಆತ್ಮವೇ; ಮಾಂಸವು ಯಾವದಕ್ಕೂ ಬರುವದಿಲ್ಲ. ನಾನು ನಿಮಗೆ ಹೇಳಿರುವ ಮಾತುಗಳೇ ಆತ್ಮವಾಗಿಯೂ ಜೀವವಾಗಿಯೂ ಅವೆ"** (ಯೋಹಾ. 6:63). ಈ ವಾಕ್ಯವೂ ಕ್ರಿಯೆ ಮಾಡುವಂತದ್ದಾಗಿದೆ. ಇಬ್ರಿ. 4:12 ವಾಕ್ಯವೇ ಯೇಸುಕ್ರಿಸ್ತನಾಗಿದ್ದಾನೆ. ಯೋಹಾ. 1:1-2 ವಾಕ್ಯವಾದತನು ಯೇಸುಕ್ರಿಸ್ತನು. ನರಾವತಾರ ಎತ್ತಿ ಈ ಲೋಕಕ್ಕೆ ಬಂದನು. ನನ್ನನ್ನು ಮತ್ತು ನಿಮ್ಮೆಲ್ಲರನ್ನು ರಕ್ಷಿಸುವುದಕ್ಕಾಗಿ. ಆ ಯೇಸುಕ್ರಿಸ್ತನ ರಕ್ಷಣೆಯ ಸುವಾರ್ತೆಯನ್ನು ಈ ದೇವರ ಸ್ವರ ಮಾಸ ಪತ್ರಿಕೆಯು ಅನೇಕ ಪಟ್ಟಣಗಳಿಗೂ, ರಾಜ್ಯಗಳಿಗೂ, ದೇಶಗಳಿಗೂ ಹೊತ್ತುಕೊಂಡು ಹೋಗುತ್ತಿರುವುದಕೋಸ್ಕರ ಸಂತೋಷಪಡುತ್ತೇನೆ. ಯೋಹಾ. 1:9 ವಾಕ್ಯ ಹೇಳುತ್ತದೆ, ನಿಜವಾದ ಬೆಳಕು ಲೋಕಕ್ಕೆ ಬರುವದಾಗಿತ್ತು; ಆ ಬೆಳಕೇ ಪ್ರತಿ ಮನುಷ್ಯನಿಗೂ ಬೆಳಕನ್ನು ಕೊಡುವಂಥದು. ಎಷ್ಟೇ ಕೆಟ್ಟ ವ್ಯಕ್ತಿಯಾಗಿದ್ದರೂ ಕೂಡಾ ಯೇಸುಕ್ರಿಸ್ತನಿಂದ ಬದಲಾಯಿಸಲು ಸಾಧ್ಯ. ಆದಕಾರಣ ಯೇಸುಕ್ರಿಸ್ತನು ಈ ಮಾಸ ಪತ್ರಿಕೆಯ ಮೂಲಕ ಅನೇಕರನ್ನು ಬದಲಾಯಿಸುತ್ತಿದ್ದಾನೆ, ಅನೇಕರಿಗೆ ಸಮಾಧಾನ ಕೊಡುತ್ತಿದ್ದಾನೆ, ಅನೇಕರಿಗೆ ದೈವೀಕ ಜ್ಞಾನ ಕೊಡುತ್ತಿದ್ದಾನೆ, ಅನೇಕರಿಗೆ ಸ್ಥಿರತೆ ಕೊಡುತ್ತಿದ್ದಾನೆ, ಅನೇಕರಿಗೆ ರಕ್ಷಣೆ ಕೊಡುತ್ತಿದ್ದಾನೆ ಮತ್ತು ಅನೇಕರನ್ನು ಬರೋಣಕ್ಕಾಗಿ ಸಿದ್ಧಪಡಿಸುತ್ತಿದ್ದಾನೆಂದು ಹೇಳಲು ಇಷ್ಟಪಡುತ್ತಿದ್ದೇನೆ ಈ ಮಾಸ ಪತ್ರಿಕೆಗಾಗಿ ಪ್ರತಿದಿನ ದಯವಿಟ್ಟು ಪ್ರಾರ್ಥಿಸಬೇಕಾಗಿ ತಮ್ಮಲ್ಲಿ ಕಳಕಳಿಯಿಂದ ವಿನಂತಿಸಿಕೊಳ್ಳುತ್ತೇವೆ.

ಕರ್ತನು ನಿಮ್ಮನ್ನು ಆಶೀರ್ವದಿಸಲಿ.

*ಹಿರಿಯ ಸಂಪಾದಕ*

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**

# ಪ್ರಕಟಣೆ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

**ಸಾವಿರ ವರ್ಷಗಳ ಆಡಳಿತದಲ್ಲಿ ಮೂರು ಗುಂಪಿನ ಜನರಿರುತ್ತಾರೆ :**

1) **ದೇವರ ಸಭೆ**: ಮತ್ತಾ. 19:28 ಯೇಸು ಅವರಿಗೆ **ನಿಮಗೆ ಸತ್ಯವಾಗಿ ಹೇಳುತ್ತೇನೆ, ಹೊಸ ಸೃಷ್ಟಿಯಲ್ಲಿ ಮನುಷ್ಯಕುಮಾರನು ತನ್ನ ಮಹಿಮೆಯ ಸಿಂಹಾಸನದ ಮೇಲೆ ಕೂತುಕೊಳ್ಳುವಾಗ ನನ್ನನ್ನು ಹಿಂಬಾಲಿಸಿರುವ ನೀವು ಸಹ ಹನ್ನೆರಡು ಸಿಂಹಾಸನಗಳ ಮೇಲೆ ಕುಳಿತುಕೊಂಡು ಇಸ್ರಾಯೇಲಿನ ಹನ್ನೆರಡು ಕುಲಗಳಿಗೆ ನ್ಯಾಯತೀರಿಸುವಿರಿ** (ಮತ್ತಾ. 25:21–23, ಲೂಕ. 16:10, ಲೂಕ. 19:11–27, ಲೂಕ. 19:17–19).

2) **ಜನಾಂಗಗಳು:** ಯೆಶಾ. 66:19 ನಾನು ಇನ್ನು ಮುಂದೆ ಸಮಸ್ತ ಜನಾಂಗಗಳನ್ನೂ ಸಕಲಭಾಷೆಯವರನ್ನು ಒಟ್ಟಿಗೆ ಬರಮಾಡುವೆನು. ಅವರು ಬಂದು ನನ್ನ ಮಹಿಮೆಯನ್ನು ನೋಡುವರು. ಅವರ ಮಧ್ಯದಲ್ಲಿ ಒಂದು ಸೂಚಕ ಕಾರ್ಯವನ್ನು ಮಾಡುವೆನು. ಇವರು ಜನಾಂಗಗಳಲ್ಲಿ ನನ್ನ ಮಹಿಮೆಯನ್ನು ಪ್ರಕಟಿಸುವರು. ಈ ಕಾಲದಲ್ಲಿ ಜನಾಂಗಳು ಪಶ್ಚಾತ್ತಾಪಪಟ್ಟು ದೇವರ ಕಡೆಗೆ ತಿರುಗಿಕೊಂಡು ಇಸ್ರಾಯೇಲ್ ಜನರಿಗೆ ದಾಸರಾಗಿರುತ್ತಾರೆ (ಅ.ಕೃ. 9:12). ಯೆಶಾ. 14:1, 16:5 ಕರ್ತನಾದ ಯೇಸುಕ್ರಿಸ್ತನಿಗೆ ಅಧೀನರಾಗಿರುತ್ತಾರೆ. ಮತ್ತಾ. 25:34 ಇವರೆಲ್ಲರೂ ತಂದೆಯಿಂದ ಆಶೀರ್ವದಿಸಲ್ಪಟ್ಟವರು.

3) **ಇಸ್ರಾಯೇಲ್ಯರು:** ಮಹಾಸಂಕಟ ಕಾಲದ ಕೊನೆಯಲ್ಲಿ ಕ್ರಿಸ್ತ ವಿರೋಧಿಯ ಹಿಂಸೆಯಿಂದಾಗಿ ಇಸ್ರಾಯೇಲ್ ಜನರು ಮಾನಸಾಂತರ ಹೊಂದಿ ಯೇಸುಕ್ರಿಸ್ತನ ಕಡೆಗೆ ತಿರುಗಿಕೊಳ್ಳುವರು. ಸಾವಿರ ವರುಷಗಳ ಆಡಳಿತದಲ್ಲಿ ಪ್ರವೇಶಿಸಿ ಮೆಸ್ಸೀಯನೊಂದಿಗೆ ಭೂಮಿಯನ್ನು ಆಳುವರು.

ಈ ಸಾವಿರ ವರುಷಗಳ ಕ್ರಿಸ್ತನ ಆಡಳಿತವೂ ನಿಜವಾಗಿ ಶಾಂತಿಯ, ನೀತಿಯ, ಪ್ರೀತಿಯ, ಸಮಾಧಾನದಿಂದ ತುಂಬಿದ ಆಡಳಿತವಾಗಿರುತ್ತದೆ. ಈ ಲೋಕ ಸೃಷ್ಟಿಯಾದಂದಿನಿಂದ ಅನೇಕ ಮನುಷ್ಯಾಡಳಿತಗಳು ಈ ಲೋಕದಲ್ಲಿ ಬಂದಿದ್ದಾದರೂ ಪ್ರತಿಯೊಂದು ಆಡಳಿತದಲ್ಲಿ ಏನಾದರೊಂದು ಕೊರತೆ ಇರುವುದನ್ನು ಕಾಣಬಹುದು. ಆದರೆ ಸಾವಿರ ವರುಷಗಳ ಕ್ರಿಸ್ತನ ಆಡಳಿತದಲ್ಲಿ ಜನರು ಶಾಂತಿ ಸಮಾಧಾನಗಳನ್ನು ಕಾಣುವರು. ಅಕ್ರಮ, ಅಪರಾಧಗಳಿಲ್ಲದ, ಭ್ರಷ್ಟಾಚಾರ ಇಲ್ಲದಂತಹ ಒಂದು ಆಡಳಿತವು ಇದಾಗಿರುತ್ತದೆ.

**ಸಾವಿರ ವರ್ಷಗಳ ಕ್ರಿಸ್ತಾಡಳಿತದಲ್ಲಿ ನಾವು ಕಾಣುವಂಥಹ ಮುಖ್ಯ ಸಂಗತಿಗಳು :**

1) ಯೆಶಾ. 11:10 ಜನರು ಇಷಯನ ಅಂಕುರದವನಾದ ಯೇಸುಕ್ರಿಸ್ತನನ್ನು ಆಶ್ರಯಿಸುವರು.

2) ಯೆಶಾ. 11:10 ಕರ್ತನ ವಿಶ್ರಮ ಸ್ಥಾನವು ವೈಭವವುಳ್ಳದ್ದಾಗಿರುವುದು.

3) ಯೆಶಾ. 4:2 ಆ ದಿನದಲ್ಲಿ ಯೆಹೋವನು ದಯಪಾಲಿಸುವ ಬೆಳೆಯಿಂದ ಇಸ್ರಾಯೇಲ್ಯರಲ್ಲಿ ಉಳಿದವರಿಗೆ ಸೌಂದರ್ಯವು ಮಹಿಮೆಯೂ ಉಂಟಾಗುವವು. ದೇಶದ ಫಲದಿಂದ ಉನ್ನತಿಯೂ ಭೂಷಣವೂ ಲಭಿಸುವವು.

4) ಯೆಶಾ. 4:3 ಜೀವಬಾಧ್ಯರ ಪಟ್ಟಿಯಲ್ಲಿ ಹೆಸರು ಬಿದ್ದ ಯೆರೂಸಲೇಮಿನವರೆಲ್ಲರೂ ದೇವರ ಜನರೆನಿಸಿಕೊಳ್ಳುವರು.

5) ಯೆಶಾ. 4:5 ಚೀಯೋನ್ ಪರ್ವತದ ಸಂಪೂರ್ಣ ಮಂದಿರದ ಮೇಲೆಯೂ ಅಲ್ಲಿನ ಕೂಟಗಳ ಮೇಲೆಯೂ ಹಗಲಲ್ಲಿ ಧೂಮ ಮೇಘವನ್ನು, ಇರುಳಲ್ಲಿ ಪ್ರಜ್ವಲಿಸುವ ಅಗ್ನಿಯ ಪ್ರಕಾಶವನ್ನು, ಉಂಟುಮಾಡುವನು (ಇಸ್ರಾಯೇಲ್ ಜನರು ಐಗುಪ್ತದೇಶದಿಂದ ಕಾನಾನಿಗೆ ಹೋಗುವಾಗ ಕರ್ತನು ಹಗಲಿನಲ್ಲಿ ಮೇಘಸ್ತಂಭವಾಗಿ, ರಾತ್ರಿಯಲ್ಲಿ ಬೆಳಕಿನ ಸ್ತಂಭವಾಗಿ ನಡೆಸಿದ್ದನ್ನು ಜ್ಞಾಪಿಸಿಕೊಳ್ಳಬಹುದು (ವಿಮೋ. 13:1–2).

6) ಯೆಶಾ. 4:6 ಹಗಲಿನ ಬಿಸಿಲಲ್ಲಿ ನೆರಳನ್ನೂ ಸಣ್ಣ ದೊಡ್ಡ ಮಳೆಗಳಲ್ಲಿ ಆಶ್ರಯವನ್ನೂ ಕೊಡುವ ಮಂಟಪವಿರುವುದು.

7) ಯೆಶಾ. 9:7 ಆ ರಾಜ್ಯವು ನೀತಿ ನ್ಯಾಯಗಳ ಮೂಲಕ ಸ್ಥಾಪಿತವಾಗಿ ಸ್ಥಿರಗೊಳ್ಳುವದು ಯೆಶಾ. 32:1.

8) ಯೆಶಾ. 35:10 ಹರ್ಷನಂದಗಳಿರುವವು (ಯೆಹೋವನು ವಿಮೋಚಿಸಿದವರು ಹಿಂದಿರುಗಿ ಶಾಶ್ವತ ಸಂತೋಷವೆಂಬ ಕಿರೀಟವನ್ನು ಧರಿಸಿಕೊಂಡು ಉತ್ಸಾಹಧ್ವನಿಯೊಡನೆ ಚೀಯೋನಿಗೆ ಸೇರುವರು. ಹರ್ಷಾನಂದಗಳನ್ನು ಅನುಭವಿಸುವರು. ಮೊರೆಯೂ ಕರಕರೆಯೂ ತೊಲಗಿ

ಏಳು, ಪ್ರಕಾಶಿಸು, ನಿನಗೆ ಬೆಳಕು ಬಂತು, ಯೆಹೋವನ ತೇಜಸ್ಸು ನಿನ್ನ ಮೇಲೆ ಉದಯಿಸಿದೆ (ಯೆಶಾ. 60:1).

ಹೋಗುವವು.

9) ಯೆಶಾ. 35:1–2 ಅರಣ್ಯ ಮತ್ತು ಒಣನೆಲದಲ್ಲಿ ಸಮೃದ್ಧಿಯನ್ನು ಕಾಣುವುದು.

10) ಯೆಶಾ. 35:5–6 ಕಿವುಡ, ಮೂಕ, ಕುಂಟ, ಕುರುಡರೆಂಬ ರೋಗಿಗಳು ಆರೋಗ್ಯ ಹೊಂದಿ ಸಾಮಾನ್ಯ ಮನುಷ್ಯನ ಹಾಗಾಗುವರು.

11) ಯೆಶಾ. 35:7 ಒಂದು ಸಮೃದ್ಧಿಯನ್ನು ಭೂಮಿಯಲ್ಲಿ ಕಾಣಲು ಸಾಧ್ಯವಾಗುವುದು.

12) ಯೆಶಾ. 35:8–9 ಅಲ್ಲಿ ಅಶುದ್ಧನು ಇರನು. ಕ್ರೂರ ಜಂತುಗಳು ಇರಲಾರವು. ಬಿಡುಗಡೆಯಾದವರೇ ಅಲ್ಲಿ ನಡೆದಾಡುವರು.

**ಸಾವಿರ ವರ್ಷಗಳ ಆಡಳಿತದಲ್ಲಿ ಜನರಲ್ಲಿ ಉಂಟಾಗುವ ಆತ್ಮೀಕ ಸ್ವಭಾವಗಳು :**

1) **ನೀತಿ ನ್ಯಾಯ:** ದಾವೀದನ ರಾಜ್ಯದಲ್ಲಿ ನಿತ್ಯ ಸಮಾಧಾನವಿರುವುದು ಯಾವಾಗಲೂ ನೀತಿನ್ಯಾಯಗಳ ಮೂಲಕ ಸ್ಥಾಪಿತವಾಗಿ ಸ್ಥಿರಗೊಳ್ಳುವುದು (ಯೆರೆ. 23:5, ಯೆಶಾ. 32:16).

2) **ಆರಾಧನೆ :** (ಜೆರ್ಕ. 13:2 ಭೂಮಂಡಲ ಪೂರ್ತಿಯಾಗಿ ಎಲ್ಲ ಜನರೂ ಯೆಹೋವ ದೇವರನ್ನೇ ಆರಾಧಿಸುವರು.

3) **ಪರಿಶುದ್ಧತೆ:** ಯೆಶಾ. 1:27 ಈ ಆಡಳಿತ ಕಾಲದಲ್ಲಿ ಯೆರೂಸಲೇಮ ಪಟ್ಟಣ ದೇವಾಲಯ ಮತ್ತು ಜನರ ಕೆಲಸ, ವ್ಯವಹಾರದಲ್ಲಿ ನೀತಿಯುಳ್ಳದ್ದು, ಪರಿಶುದ್ಧತೆಯುಳ್ಳದ್ದು ಆಗಿರುತ್ತವೆ.

4) **ಸಮಾಧಾನ:** (ಯೆಶಾ. 2:18 ಯೆಶಾ. 60:18) ಈ ಕಾಲದಲ್ಲಿ ಲೋಕವನ್ನೆಲ್ಲಾ ಒಬ್ಬನೇ ಅರಸನು ಆಳುವುದರಿಂದ ಲೋಕ ರಾಷ್ಟ್ರದೊಳಗಿನ ಯುದ್ಧವು ನಿಂತು ಲೋಕದಲ್ಲೆಲ್ಲಾ ಶಾಂತತೆ ಇರುತ್ತದೆ. ಆತ್ಮೀಕ, ಆರ್ಥಿಕ, ಸಾಮಾಜಿಕವಾಗಿ ಜನರೆಲ್ಲರೂ ಉನ್ನತ ಮಟ್ಟದಲ್ಲಿರುವುದರಿಂದ ಪರಸ್ಪರ, ದ್ವೇಷ, ಕೋಪ, ಜಗಳ, ಮೋಸ, ವಂಚನೆಗಳಿಲ್ಲದೆ ಜನರು ಸಮಾಧಾನದಿಂದ ಜೀವಿಸುತ್ತಾರೆ.

5) **ಉಲ್ಲಾಸ:** ಯೆಶಾ. 60:15, 66:10 ಈ ಕಾಲದಲ್ಲಿ ಪ್ರತಿಯೊಬ್ಬರು ಉಲ್ಲಾಸಭರಿತರೂ, ಆನಂದಭರಿತರೂ, ಹರ್ಷಭರಿತರೂ, ಆನಂದದಿಂದ ಜೀವಿಸುವವರೂ ಆಗಿರುತ್ತಾರೆ.

6) **ಶಾಪ ವಿಮುಕ್ತಿ:** ಯೆಶಾ. 65:25 ಸಾವಿರ ವರುಷದ ಆಳ್ವಿಕೆಯು ಶಾಪವಿಲ್ಲದ, ಶಾಪರಹಿತವಾಗಿರುತ್ತದೆ.

7) **ಸಂತೈಸುವಿಕೆ:** ಯೆಶಾ. 40:1 ಜೆರ್ಕ. 9:11 ಈ ಆಡಳಿತದಲ್ಲಿ ಕರ್ತನಾದ ಯೇಸುಕ್ರಿಸ್ತನಿಂದ ಪ್ರತಿಯೊಬ್ಬರೂ ಸಂತೈಸಲ್ಪಡುವರು.

8) **ದೇವರ ಮಹಿಮೆ:** ಯೆಶಾ. 40:5 ಭೂಮಂಡವೆಲ್ಲಾ ಯೆಹೋವನ ಮಹಿಮೆಯಿಂದ ತುಂಬಲ್ಪಟ್ಟಿರುತ್ತದೆ.

9) **ದೈವೀಕ ಜ್ಞಾನ :** ಯೆಶಾ. 11:9, ಹಬ. 2:14 ಸಮುದ್ರದಲ್ಲಿ ನೀರು ಹೇಗೋ ಹಾಗೆಯೇ ಪ್ರತಿ ಜ್ಞಾನದಲ್ಲೂ ದೈವೀಕ ಜ್ಞಾನವಿರುತ್ತದೆ.

10) **ಮಾರ್ಗದರ್ಶನ:** ಯೆರೆ. 3:14 ಕ್ರಿಸ್ತನು ಎಲ್ಲರಿಗೂ ಮಾರ್ಗದರ್ಶಕನಾಗಿರುತ್ತಾನೆ.

11) **ಹರ್ಷಾನಂದ:** ಯೆಶಾ. 35:10 ಹರ್ಷನಂದದೊಡನೆ ಜನರು ಜೀವಿಸುವರು (ಯೆಶಾ. 65:18).

12) **ಆಶೀರ್ವಾದ:** ಯೆಶಾ. 65:23 ಕರ್ತನ ಆಶೀರ್ವಾದವನ್ನು ಜನರು ಸದಾ ಅನುಭವಿಸುವರು.

ಮುಂದುವರಿಯುವದು.......

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಭಾಪಾಲಕರು, ಬೇತೇಲ್ ಚರ್ಚ್.

**ದಯಮಾಡಿ ನಿಮ್ಮ ಗಮನಕ್ಕೆ:** ವಿಶ್ವಾಸದ ಮನೆಯು ಕೇವಲ ರಸ್ತೆಯಲ್ಲಿರುವ ಅನಾಥರು ಹಾಗೂ ನಿರ್ಗತಿಕರಿಗೆ ಮಾತ್ರ ಮೀಸಲಾಗಿದೆ. ವಿನಹ ಮನೆಯವರಿಗಲ್ಲ. ದಯಮಾಡಿ ಯಾರ ಪ್ರಭಾವ ಅಥವಾ ಒತ್ತಡವನ್ನು ವಿಶ್ವಾಸದ ಮನೆಯ ಆಡಳಿತ ಮಂಡಳಿಗಾಗಲಿ ಅಥವಾ ಇನ್ನಾವ ಸಭೆಯವರಿಗಾಗಲಿ, ಸೇವಕರಿಗಾಗಲಿ ಮಾಡಬಾರದೆಂದು ಈ ಮೂಲಕ ನಮ್ಮ ಎಲ್ಲಾ ಓದುಗರಿಗೂ ಮತ್ತು ಹಿತೈಷಿಗಳಿಗೂ ನಮ್ರತೆಯಿಂದ ಕೇಳಿಕೊಳ್ಳುತ್ತೇವೆ.

**– ಸಂಪಾದಕರು, ದೇವರ ಸ್ವರ.**

ನಿಮ್ಮ ಕಣಜಗಳೂ ಯಾವಾಗಲೂ ತುಂಬಿರುವಂತೆಯೂ ನಿಮ್ಮ ಪ್ರಯತ್ನಗಳೆಲ್ಲಾ ಸಫಲವಾಗುವಂತೆಯೂ ನಿಮ್ಮ ದೇವರಾದ ಯೆಹೋವನು ನಿಮಗೆ ಶುಭವನ್ನು ಅನುಗ್ರಹಿಸುವನು (ಧರ್ಮೋ. 28:8).

# ಭಕ್ತರ ಹೇಳಿಕೆಗಳು:

* **ಜಾರ್ಜ್ ವಾಷಿಂಗ್‌ಟನ್ :** "ದೇವರು, ಸತ್ಯವೇದವು ಇಲ್ಲದಿದ್ದರೆ ಈ ಪ್ರಪಂಚವನ್ನು ಸರಿಯಾದ ರೀತಿಯಲ್ಲಿ ಆಳುವುದು ಸಾಧ್ಯವಿಲ್ಲದ ಕಾರ್ಯ. ಯಾರೊಬ್ಬನು ಸತ್ಯವೇದವನ್ನು ಓದದೆ ಕರ್ತನಿಗಾಗಿ ತನ್ನ ಕರ್ತವ್ಯಗಳನ್ನು ಮಾಡದೆ ಇರುವನೋ ಅವನು ನಾಸ್ತಿಕನಿಗಿಂತಲೂ ಕೀಳವಲನಾದವನು".

* **ಥಾಮಸ್ ಜೆಬರ್‌ಸನ್ :** "ಸತ್ಯವೇದವನ್ನು ಗಮನವಿಟ್ಟು ಪರಿಶೀಲಿಸಿ ಓದುವವರು ಒಳ್ಳೆಯ ಪ್ರಜೆಗಳಾಗಿಯೂ, ಒಳ್ಳೆಯ ಗೃಹಸ್ಥರಾಗಿಯೂ, ಒಳ್ಳೆಯ ತಂದೆ ತಾಯಿಗಳಾಗಿಯೂ, ಒಳ್ಳೆಯ ಗಂಡಂದಿರಾಗಿಯೂ ಇರುವರು ಎಂಬದಾಗಿ ನಾನು ಯಾವಾಗಲೂ ಹೇಳುತ್ತೇನೆ. ಸತ್ಯವೇದವು ಪ್ರಪಂಚದಲ್ಲಿ ಒಳ್ಳೆಯ ಜನರನ್ನು ರೂಪಿಸುತ್ತದೆ"

* **ಅಬ್ರಹಾಮ್ ಲಿಂಕನ್ :** "ಸತ್ಯವೇದ ವಚನವನ್ನು ನಾನು ಅತ್ಯಾವಶ್ಯವೆಂದು ಎಣಿಸುತ್ತೇನೆ. ದೇವರು ಮಾನವನಿಗೆ ನೀಡಿದಂಥ ಅತ್ಯುತ್ತಮವಾದ ಪುಸ್ತಕ ಸತ್ಯವೇದ!".

* **ವಿಲ್ಲಿಯಂ ಈ ಗ್ಲಾಡಸ್ಟನ್ :** "ಕೇಳಬೇಕಾದದು ಒಂದೇ ಒಂದು; ಅದೇ ಸುವಾರ್ತೆ ತಿದ್ದಬೇಕಾದ್ದೆಲ್ಲವನ್ನು ಸುವಾರ್ತೆಯೇ ತಿದ್ದಬಲ್ಲದು. ಈ ಪ್ರಪಂಚದಲ್ಲಿ ನನಗಿರುವ ಒಂದೇ ಒಂದು ನಂಬಿಕೆ ಯಾವದೆಂದರೆ ಮಾನವನ ತಿಳುವಳಿಕೆಯನ್ನು ದೈವಿಕ ಪ್ರಕಟಣೆಯೊಂದಿಗೆ ಒಂದುಗೂಡಿಸುವದು".


---

# ನಮ್ಮೊಂದಿಗೆ ಆಚರಿಸಿ

**ನಿಮ್ಮ ಹುಟ್ಟಿದ ದಿನ, ನಿಮ್ಮ ಮದುವೆ ದಿನ ನಿಮ್ಮ ಮಕ್ಕಳ ಹುಟ್ಟಿದ ದಿನ ಹಾಗೂ ನಿಮ್ಮ ನೆಚ್ಚಿನ ಗೆಳೆಯ/ಗೆಳತಿಯರ ಹುಟ್ಟಿದ ದಿನವನ್ನು ನಮ್ಮ ಅನಾಥಾಶ್ರಮದ ನಿವಾಸಿಗಳೊಂದಿಗೆ ಆಚರಿಸಲು ಬಯಸುವುದಾದರೆ ನಿಮ್ಮೆಲ್ಲರಿಗೂ ಸ್ವಾಗತ**




**ಹೆಚ್ಚಿನ ವಿವರಗಳಿಗಾಗಿ ನಮ್ಮನ್ನು ಸಂಪರ್ಕಿಸಿರಿ**
**ಮೊಬೈಲ್: 9902334941**



**"ದಯಾದೃಷ್ಟಿಯವನು ಆಶೀರ್ವಾದವನ್ನು ಪಡೆಯುವನು;**
**ತನ್ನ ಅನ್ನವನ್ನು ಬಡವರಿಗೆ ಕೊಡುತ್ತಾನಲ್ಲವೆ."** ಜ್ಞಾನೋಕ್ತಿ 22:9.

ಯೆಹೋವನೇ, ನನ್ನ ಕಾಲು ಜಾರಿತೆಂದು ಅಂದಾಗಲೇ ನಿನ್ನ ಕೃಪೆಯು ನನಗೆ ಆಧಾರವಾಯಿತು
(ಕೀರ್ತ. 94:18).

**ವಯಸ್ಕರ ಸ್ವರ**

# ತೀರ್ಮಾನಗಳು

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

**ಬೇಗನೆ ಬರುತ್ತೇನೆ; ನಿನಗಿರುವುದನ್ನು ಹಿಡಿದುಕೊಂಡಿರು; ನಿನ್ನ ಜಯಮಾಲೆಯನ್ನು ಯಾರೂ ಅಪಹರಿಸಬಾರದು. ಯಾವನು ಜಯಹೊಂದುತ್ತಾನೋ ಅವನನ್ನು ನನ್ನ ದೇವರ ಆಲಯದಲ್ಲಿ ಸ್ತಂಭವಾಗಿ ನಿಲ್ಲಿಸುವೆನು"** (ಪ್ರಕ. 3:11–12) ಪ್ರಿಯ ದೇವ ಮಗುವೆ ಯೇಸುಕ್ರಿಸ್ತನ ನಾಮದಲ್ಲಿ ವಂದನೆಗಳು. ಪ್ರಿಯರೇ, ಚಿಕ್ಕ ಮಕ್ಕಳ ಕೈಯಲ್ಲಿ ತಿಂಡಿ ತಿನಿಸುಗಳನ್ನು ಹಿಡಿದುಕೊಂಡು ಹೋಗುತ್ತಿರುವಾಗ ಕಾಗೆ ಕೈಯಿಂದ ಎಗರಿಸಿಕೊಂಡು ಹೋಗುವುದನ್ನು ನಾವು ಕಾಣಬಹುದು. ಕಾರಣ ಮಕ್ಕಳು ಎಚ್ಚರವಹಿಸದೆ ಹಾಗೂ ಸರಿಯಾಗಿ ಬಿಗಿಯಾಗಿ ಹಿಡಿದುಕೊಂಡು ಹೋಗದೆ ಇರುವುದರಿಂದ ಕಾಗೆಗಳು ಸುಲಭವಾಗಿ ಹಾರಿಸಿಕೊಂಡು ಹೋಗುವದು. ಅದೇ ಪ್ರಕಾರ ದೇವರು ನಮಗೆ ಕೊಟ್ಟ ಜಯಮಾಲೆಯನ್ನು ಅಪಹರಿಸುವುದಕ್ಕೆ ಸೈತಾನನು ಹೊಂಚು ಹಾಕುತ್ತಿರುವನು. ನಾವು ಅದನ್ನು ಬಿಗಿಯಾಗಿ ಹಿಡಿದುಕೊಳ್ಳದ ಪಕ್ಷದಲ್ಲಿ ನಾವು ಅದನ್ನು ಕಳೆದುಕೊಳ್ಳುವುದು ನಿಶ್ಚಯ. ದೇವರು ನಮ್ಮ ವಶಕ್ಕೆ ಕೊಟ್ಟಿರುವುದನ್ನು ಅಮೂಲ್ಯವೆಂದು ಕಾಪಾಡಿ ಕೊಳ್ಳಬೇಕಾಗಿದೆ. **"ನಿನ್ನ ವಶಕ್ಕೆ ಕೊಡಲ್ಪಟ್ಟಿರುವುದನ್ನು ಶ್ರೇಷ್ಠವೆಂದು ತಿಳಿದು ನಮ್ಮಲ್ಲಿ ವಾಸವಾಗಿರುವ ಪವಿತ್ರಾತ್ಮನ ಮೂಲಕ ಕಾಪಾಡು"** (2 ತಿಮೊ. 1:14). ನಾವು ನಮ್ಮ ವಶಕ್ಕೆ ಕೊಟ್ಟಿರುವುದನ್ನು ಉಳಿಸಿಕೊಳ್ಳಬೇಕಾದರೆ ಮುಖ್ಯವಾಗಿ 4 ಅಂಶಗಳನ್ನು ಅನುಸರಿಸಬೇಕಾಗಿದೆ.

1. **ಬಿಗಿಯಾಗಿ ಹಿಡಿದುಕೊಂಡಿರಬೇಕು:** (ಪ್ರಕ. 2:25) ನಿಮಗಿರುವುದನ್ನು ನಾನು ಬರುವ ತನಕ ಬಿಗಿಯಾಗಿ ಹಿಡಿದುಕೊಂಡಿರು. ಪ್ರಿಯ ದೇವ ಮಗುವೆ ಬಲಹೀನ ಮನುಷ್ಯನಲ್ಲಿರುವುದನ್ನು ವೈರಿ ಸುಲಭವಾಗಿ ಅಪಹರಿಸುತ್ತಾನೆ. ನೀವು ಬಿಗಿಯಾಗಿ ಹಿಡಿದು ಕೊಳ್ಳಬೇಕಾದರೆ ನಮಗೆ ಶಕ್ತಿ, ತಾಕತ್ತುಬೇಕು. ಆ ಶಕ್ತಿಯೇ ಪವಿತ್ರಾತ್ಮನ ಬಲವಾಗಿದೆ. 'ಪವಿತ್ರಾತ್ಮನು ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದಿ' (ಅ.ಕೃ. 1:8). ಪವಿತ್ರಾತ್ಮನ ಮೂಲಕ ಕಾಪಾಡು (2 ತಿಮೊ. 1:14). ರಕ್ತಮಾಂಸದ ಬಲದಿಂದ, ಆತ್ಮೀಕವಲ್ಲದ ಜೀವಿತದಿಂದ ಖಂಡಿತವಾಗಿ ನಾವು ಶ್ರೇಷ್ಠವಾದುದ್ದನ್ನು ನಮ್ಮ ಬಳಿಯಿಂದ ಕಳೆದುಕೊಳ್ಳುವ ಅಪಾಯದಲ್ಲಿದ್ದೇವೆ. ಪ್ರಿಯರೇ ನಮ್ಮ ಶರೀರಭಾವದ ಜೀವಿತ ದೇವರ ನಿಯಮಕ್ಕೆ ಒಳಗಾಗಲು ಸಾಧ್ಯವಿಲ್ಲ (ರೋಮ. 8:6–8). ಶರೀರಭಾವಾಧೀನರು ದೇವರಿಗೆ ಮೆಚ್ಚಿಕೆಯಾಗಿರಲಾರರು (ರೋಮ. 8:8). 'ನಾವು ಕರ್ತನನ್ನು ಆತನ ಅತ್ಯಧಿಕ ಶಕ್ತಿಯನ್ನು ಆಶ್ರಯಿಸಿಕೊಂಡವರಾಗಿ ಬಲಗೊಳ್ಳಬೇಕಾಗಿದೆ' (ಎಫೆ. 6:10). ನಮಗೆ ಕೊಟ್ಟಿರುವುದನ್ನು ಬಲಹೀನರಾದ ನಾವು ಹಿಡಿದುಕೊಳ್ಳಲು ಸಾಧ್ಯವಿಲ್ಲವೆಂದು ದೇವರು ನಮಗೆ ಪವಿತ್ರಾತ್ಮವನ್ನು ಸಹಾಯಕನಾಗಿ ಕೊಟ್ಟಿರುತ್ತಾನೆ. ಸತ್ಯವೇದ ಹೇಳುತ್ತದೆ, ನಾವು ಪವಿತ್ರಾತ್ಮನಿಗೆ ಗರ್ಭಗುಡಿಯಾಗಿದ್ದೇವೆ. ಪವಿತ್ರಾತ್ಮನ ವಿರುದ್ಧ ಹಾಗೂ ದೇವರ ಚಿತ್ತವಿಲ್ಲದ ಕಾರ್ಯಗಳನ್ನು ಮಾಡುವುದರಿಂದ ಪವಿತ್ರಾತ್ಮನು ನಮ್ಮಲ್ಲಿ ನೆಲೆಸಲು ಬಯಸುವುದಿಲ್ಲ (ಅ.ಕೃ. 5:32). **"ನಿತ್ಯಜೀವವನ್ನು ಹಿಡಿದುಕೊ. ದೇವರು ಅದಕ್ಕಾಗಿ ನಿನ್ನನ್ನು ಕರೆದನು"** (1 ತಿಮೊ. 6:12).

2) **ಎಚ್ಚರವಾಗಿರಬೇಕು:** ಬಿಗಿಯಾಗಿ ಹಿಡಿದುಕೊಂಡು ಎಚ್ಚರವಾಗಿರದಿದ್ದರೆ ಶತ್ರು ಅದನ್ನು ಅಪಹರಿಸಬಹುದಾಗಿದೆ. **"ಆದಕಾರಣ ನಿಂತಿದ್ದೇನೆಂದು ನೆನೆಸುವವನು ಬೀಳದಂತೆ ಎಚ್ಚರಿಕೆಯಾಗಿರಲಿ"** ( 1 ಕೊರಿ. 10:12). ಸೈತಾನನು ನಮ್ಮಲ್ಲಿರುವುದನ್ನು ಅಪಹರಿಸಲು ಹೊಂಚು ಹಾಕುತ್ತಿರುವನು. **"ಸ್ವಸ್ಥಚಿತ್ತರಾಗಿರಿ. ಎಚ್ಚರವಾಗಿರಿ ನಂಬಿಕೆಯಲ್ಲಿ ದೃಢವಾಗಿದ್ದು ಆತನನ್ನು ಎದುರಿಸಿರಿ"** (1 ಪೇತ್ರ. 5:8–9). ಯೇಸು ಹೇಳುತ್ತಾರೆ, 'ನನ್ನ ಕುರಿಗಳು ನನ್ನ ಸ್ವರ ಕೇಳುತ್ತವೆ ಅವು ನನ್ನ ಹಿಂದೆ ಬರುತ್ತವೆ. ಅವುಗಳಿಗೆ ನಿತ್ಯಜೀವ ಕೊಡುತ್ತೇನೆ. ಅವುಗಳನ್ನು ಯಾರೂ ನನ್ನ ಕೈಯೊಳಗಿಂದ ಕಸಕೊಳ್ಳರು (ಯೋಹಾ. 10:27–29). ಪ್ರಿಯರೇ, ನಾವು ಕರ್ತನ ಸ್ವರಕ್ಕೆ ಕಿವಿಗೊಟ್ಟು ಆತನ ಹಿಂದೆ ಹೋಗುವುದಾದರೆ ಸೈತಾನನು ನಮ್ಮನ್ನು ಅಪಹರಿಸಲು ಸಾಧ್ಯವಿಲ್ಲ. ತನ್ನನ್ನು ಹಿಂಬಾಲಿಸುವವರನ್ನು ಕರ್ತನು ಕಾಪಾಡುತ್ತಾನೆ. ಆದರೆ ನಾವು ಲೋಕವನ್ನೋ, ಬೇರೆ ಏನನ್ನೋ ಹಿಂಬಾಲಿಸುವಾಗ ನಾವು ತಪ್ಪಿ ಹೋಗುತ್ತೇವೆ.

ಮುಂದುವರಿಯುವದು.......

**ಪಾ॥ ರೊನಾಲ್ಡ್ ಮಚಾದೋ**
ಬೇತೇಲ್ ಚರ್ಚ್, ಕಾಮಗೆರೆ.

ಯೆಹೋವನು ಹೀಗೆನ್ನುತ್ತಾನೆ, ನೀವು ಈ ದೇಶದಲ್ಲಿ ನೆಲೆಗೊಂಡಿದ್ದರೆ ನಾನು ನಿಮ್ಮನ್ನು ಕಟ್ಟುವೆನು
(ಯೆರೆ. 42:10).

# ಜ್ಞಾಪಿಸಿಕೋ

ಯಾಕೋಬೇ, ಇಸ್ರಾಯೇಲೇ ಈ ವಿಷಯಗಳನ್ನು ಜ್ಞಾಪಕದಲ್ಲಿಟ್ಟುಕೋ, ನನ್ನ ಸೇವಕನಾಗಿದ್ದೀಯಲ್ಲವೇ? ನಾನು ನಿನ್ನನ್ನು ನಿರ್ಮಿಸಿದೆನು. ನೀನು ನನ್ನ ಸೇವಕನು, ನಿನ್ನನ್ನು ಮರೆತುಬಿಡೆನು (ಯೆಶಾ. 44:21).

ಐಶ್ವರ್ಯವಂತನಾದ ಭಕ್ತನೊಬ್ಬನು ತನ್ನ ಕಾರಿನಲ್ಲಿ ಹೋಗುತ್ತಿದ್ದಾಗ ರಸ್ತೆಯ ಪಕ್ಕದಲ್ಲಿದ್ದ ಒಂದು ಕಸದ ತೊಟ್ಟಿಯ ಬಳಿ ಕೊಳೆ ಬಟ್ಟೆ ಧರಿಸಿದ್ದಂಥ ಒಬ್ಬ ಬಾಲಕನು ಎಂಜಲು ಪದಾರ್ಥಗಳನ್ನು ಆಯ್ದು ತಿನ್ನುತ್ತಿದ್ದದ್ದನ್ನು ನೋಡಿ ಅವನ ಫೋಟೋಗಳನ್ನು ತೆಗೆದನು. ಅವನ ಸ್ಥಿತಿಗೆ ಕನಿಕರಗೊಂಡು ಆ ಬಾಲಕನನ್ನು ತಮ್ಮ ಕಾರಿನಲ್ಲಿ ಕುಳ್ಳಿರಿಸಿಕೊಂಡು ಮನೆಗೆ ಕರೆದುಕೊಂಡು ಬಂದು ಅವನಿಗೆ ಸ್ನಾನ ಮಾಡಿಸಿ ಶುದ್ಧ ಉಡುಪನ್ನು ಉಡಿಸಿ, ಹೊಟ್ಟೆ ತುಂಬಾ ಉಣಿಸಿ, ಅವನನ್ನು ತನ್ನ ಮನೆಯಲ್ಲಿ ಇಟ್ಟುಕೊಂಡು ಸ್ವಂತ ಮಗನಂತೆ ಸಾಕಿ ಬೆಳೆಸಿದನು. ಅವನು ದೊಡ್ಡವನಾದ ಮೇಲೆ ತನ್ನನ್ನು ಸಾಕಿ ಬೆಳೆಸಿದ ತಂದೆಯ ಪ್ರೀತಿಯನ್ನು ಮರೆತುಬಿಟ್ಟನು. ಒಂದು ದಿನ ಆ ಯೌವನಸ್ಥನು ತನ್ನ ಬಾಯಲ್ಲಿ ಸಿಗರೇಟನ್ನು ಇಟ್ಟುಕೊಂಡು ಮಧುಪಾನ ಮಾಡಿದವನಾಗಿ ಮನೆಯೊಳಗೆ ಬರುವ ದೃಶ್ಯ ಆ ತಂದೆಗೆ ಸಹಿಸದಾಯಿತು. ಕೂಡಲೇ ಆತನು ತನ್ನ ಕೋಣೆಗೆ ಹೋಗಿ ಹಿಂದೆ ರಸ್ತೆಯ ಬದಿಯಲ್ಲಿದ್ದಾಗ ತೆಗೆದಿದ್ದ ಅವನ ಫೋಟೋಗಳನ್ನು ಹುಡುಕಿ ತೆಗೆದು ಆ ಯೌವನಸ್ಥನ ಮುಂದೆ ಇಟ್ಟು ಇವನು ಯಾರು ಮಗನೇ ಎಂದು ಕಣ್ಣೀರಿನೊಂದಿಗೆ ಕೇಳಿದನು. ಆಗ ಆ ಯೌವನಸ್ಥನಿಗೆ ತನ್ನ ಹಿಂದಿನ ಸ್ಥಿತಿ ಜ್ಞಾಪಕಕ್ಕೆ ಬಂದು ತನ್ನ ತಪ್ಪನ್ನು ಅರಿತುಕೊಂಡನು.

ಕರ್ತನು ಮಾಡಿದ ಉಪಕಾರಗಳನ್ನು ಮರೆಯಬೇಡ ಎಂದು ಸತ್ಯವೇದ ಹೇಳುತ್ತದೆ. ಯೆಹೋವನ ಕೃತ್ಯಗಳನ್ನು ವರ್ಣಿಸುವೆನು. ಪೂರ್ವದಿಂದ ನೀನು ನಡಿಸಿದ ಅದ್ಭುತಗಳನ್ನು ನೆನಪು ಮಾಡಿಕೊಳ್ಳುವೆನು (ಕೀರ್ತ. 77:11) ಎಂದು ಹೇಳಿ ಕರ್ತನನ್ನು ಸ್ತುತಿಸಿರಿ.

– ಸಂಗ್ರಹ.

**ಆಶ್ರಮದ ಅವಶ್ಯಕತೆಗಳು**

1. 30 ಟೇಬಲ್
2. 60 ಬೆಂಚ್
3. ಟೆಂಪೋ ಟ್ರಾವಲ್ಸ್
4. ಅಕ್ಕಿ, ಸಕ್ಕರೆ, ದವಸಧಾನ್ಯ
5. 50 ಮಂಚ
6. 50 ಹಾಸಿಗೆ
7. 50 ದಿಂಬು
8. 50 ಬೆಡ್ ಶೀಟ್
9. 50 ಹೊದಿಕೆ

ದಾನಿಗಳು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :

**9902334941, 08202002781, 09964070654.**

## ದೇವರ ಸ್ವರ ಮಾಸಪತ್ರಿಕೆಯ ಪರಿಷ್ಕರಿಸಲ್ಪಟ್ಟ ಜಾಹೀರಾತಿನ ದರಗಳು

| | | |
|---|---|---|
| Back Page Colour (Full) | : | 5,000/- |
| Front Inner Page Colour (Full) | : | 3,500/- |
| Back Inner Page Colour (Full) | : | 2,500/- |
| Inside B/W (Full Page) | : | 800/- |

ನಾನು ನಿನ್ನಲ್ಲಿ ನನ್ನ ಶಕ್ತಿಯನ್ನು ತೋರಿಸಿ ನನ್ನ ಹೆಸರನ್ನು ಲೋಕದಲ್ಲೆಲ್ಲಾ ಪ್ರಸಿದ್ಧಿಪಡಿಸಬೇಕೆಂಬ ಉದ್ದೇಶದಿಂದಲ್ಲೇ ನಿನ್ನನ್ನು ಸಾಯಿಸದೇ ಉಳಿಸಿದೆನು (ವಿಮೋ. 9:16).

## ವಿಶ್ವಾಸದ ಮನೆ ಅನಾಥಾಶ್ರಮದ ಸೇವೆಯಲ್ಲಿ ನೀವು ಪಾಲುದಾರರಾಗಲು ಬಯಸುವಿರಾ

1. ಪ್ರಾರ್ಥನೆಯ ಮೂಲಕ ಸಹಾಯ ಮಾಡಬಹುದು.
2. ಆರ್ಥಿಕವಾಗಿ ಸಹಾಯ ನೀಡಬಹುದು
3. ವಸ್ತುಗಳ ರೂಪದಲ್ಲಿ ಸಹಾಯ ನೀಡಬಹುದು.

ಆರ್ಥಿಕ ಸಹಾಯ ನೀಡಲಿಚ್ಛಿಸುವವರು :

| | | | |
|---|---|---|---|
| ತಿಂಗಳಿಗೊಮ್ಮೆ | ರೂ. 500/– | ಆರು ತಿಂಗಳಿಗೊಮ್ಮೆ | ರೂ. 6000/– |
| ಮೂರು ತಿಂಗಳಿಗೊಮ್ಮೆ | ರೂ. 2000/– | ವರ್ಷಕ್ಕೊಮ್ಮೆ | ರೂ. 8000/– |

ದಯವಿಟ್ಟು ನಮ್ಮನ್ನು ಸಂಪರ್ಕಿಸಿರಿ ಹಾಗೂ ಅನಾಥರ ಸೇವೆಯಲ್ಲಿ ನಮ್ಮೊಂದಿಗೆ ಕೈ ಜೋಡಿಸಿರಿ.

ಮೊಬೈಲ್ : 9902334941


## ಪ್ರಾರ್ಥನಾ ಮನವಿಗಳು

- ದೇವರ ಸ್ವರ ಮಾಸ ಪತ್ರಿಕೆಯ ಸೇವೆಗಾಗಿ ಪ್ರಾರ್ಥಿಸಿರಿ.
- ಪತ್ರಿ ತಿಂಗಳು ಈ ದೇವರ ಸ್ವರ ಮಾಸ ಪತ್ರಿಕೆಯು ಪ್ರತಿಯೊಬ್ಬರಿಗೆ ತಲುಪುದಕ್ಕಾಗಿ ಇದರಿಂದ ಅನೇಕರು ಆಶೀರ್ವದಿಸಲ್ಪಟ್ಟು ರಕ್ಷಣೆ ಹೊಂದುವಂತೆ ಪ್ರಾರ್ಥಿಸಿರಿ.
- ಕರ್ನಾಟಕದ ಉಜ್ಜೀವನಕ್ಕಾಗಿ, ರಕ್ಷಣೆಗಾಗಿ ಮತ್ತು ಪ್ರತಿಯೊಂದು ಸೇವಕರುಗಳಿಗಾಗಿ, ಸೇವೆಗಳಿಗಾಗಿ ಪ್ರಾರ್ಥಿಸುವುದು ಕರ್ತನು ನಮಗೆ ಕೊಟ್ಟಿರುವ ಬಹಳ ಮುಖ್ಯವಾದ ಒಂದು ಜವಾಬ್ದಾರಿ.
- ಪ್ರತಿ ನಿತ್ಯವೂ ನಮ್ಮ ರಾಜ್ಯದ 30 ಜಿಲ್ಲೆಗಳ ಹೆಸರನ್ನು ಹೇಳಿ ಆತ್ಮಭಾರದೊಂದಿಗೆ ಪ್ರಾರ್ಥಿಸೋಣ.
- ಭಾರತ ದೇಶದ ರಕ್ಷಣೆಗಾಗಿ ಪ್ರಾರ್ಥಿಸಿರಿ. ಕರ್ತನ ಕೃಪೆಯನ್ನು ದೇಶದ ಮೇಲೆ ಕೇಳಿಕೊಳ್ಳೋಣ.
- ರಾಜಕೀಯ ಗೊಂದಲಗಳು ನೀಗಲ್ಪಟ್ಟು ಉತ್ತಮವಾದ ಆಳ್ವಿಕೆ ನಾಡಿನಲ್ಲಿ ನೆಲೆಸುವಂತೆ ಕರ್ತನಲ್ಲಿ ಭಿನ್ನಹಿಸಿಕೊಳ್ಳೋಣ.
- ಸಭೆಗಳ ಉಜ್ಜೀವನಕ್ಕಾಗಿ, ಸೇವೆಗಳು ಆಶೀರ್ವದಿಸಲ್ಪಡುವದಕ್ಕಾಗಿ ಪ್ರಾರ್ಥಿಸಿರಿ.

## ಸತ್ಯವೇದದಲ್ಲಿ ದಾಖಲಾಗಿರುವ ಪ್ರಥಮ ಸಂಗತಿಗಳು

1. ಪ್ರಥಮ ಮನುಷ್ಯ (ಆದಿ. 1:27).
2. ಪ್ರಥಮ ಕುಟುಂಬ (ಆದಿ. 2:8–9).
3. ಪ್ರಥಮ ಪಾಪ (ಆದಿ. 3:6).
4. ಪ್ರಥಮ ಪ್ರವಾದನೆ (ಆದಿ. 3:14–19).
5. ಪ್ರಥಮ ರಕ್ತಧಾರೆ (ಆದಿ. 3:21).
6. ಪ್ರಥಮ ಕಾಣಿಕೆ (ಆದಿ. 4:3).
7. ಪ್ರಥಮ ಮರಣ (ಆದಿ. 4:8).
8. ಪ್ರಥಮ ಪಶ್ಚಾತ್ತಾಪ (ಆದಿ. 4:13–14).

– ಸಂಗ್ರಹ.

ಬೆಟ್ಟಗಳು ಸ್ಥಳವನ್ನು ಬಿಟ್ಟು ಹೋದಾವು; ಗುಡ್ಡಗಳು ಕದಲಿಯಾವು; ಆದರೆ ನನ್ನ ಕೃಪೆಯು ನಿನ್ನನ್ನು ಬಿಟ್ಟು ಹೋಗದು, ಸಮಾಧಾನದ ನನ್ನ ಒಪ್ಪಂದವು ಕದಲವು (ಯೆಶಾ. 54:10).

# ಕ್ರಿಸ್ತನ ಪ್ರಕಾಶವನ್ನು ಹೊಂದಿಕೋ

ಕರ್ತನಾದ ಯೇಸುಕ್ರಿಸ್ತನ ಸುಮಧುರವಾದ ನಾಮದಲ್ಲಿ ನಿಮ್ಮೆಲ್ಲರಿಗೂ ವಂದನೆಗಳು.

**ಆತನನ್ನೇ ದೃಷ್ಟಿಸಿದವರು ಪ್ರಕಾಶವನ್ನು ಹೊಂದಿದರು, ಅವರ ಮುಖವು ಲಜ್ಜೆಯಿಂದ ಕೆಡುವದೇ ಇಲ್ಲ** (ಕೀರ್ತ. 34:5).

ಕರ್ತನಲ್ಲಿ ಪ್ರಿಯರೇ ಇವತ್ತಿನ ದಿನಮಾನಗಳು ಎದ್ದು ಪ್ರಕಾಶಿಸುವ ಕಾಲವಾಗಿದೆ ಯಾರೆಲ್ಲಾ ಕರ್ತನನ್ನೇ ದೃಷ್ಟಿಸುತ್ತಾರೋ ಅವರು ಪ್ರಕಾಶವನ್ನು ಹೊಂದಿಕೊಳ್ಳುತ್ತಾರೆ. ದೇವರು ತನ್ನ ಮಹಿಮೆಯನ್ನು ಕಳುಹಿಸಿಕೊಡುತ್ತಿರುವ ಕಾಲವಾಗಿದೆ. **ಏಳು ಪ್ರಕಾಶಿಸು, ನಿನಗೆ ಬೆಳಕು ಬಂತು, ಯೆಹೋವನ ತೇಜಸ್ಸು ನಿನ್ನ ಮೇಲೆ ಉದಯಿಸಿದೆ. ಇಗೋ, ಕತ್ತಲು ಭೂಮಿಯನ್ನು ಆವರಿಸಿದೆ, ಕಾರ್ಗತಲು ಜನಾಂಗಗಳನ್ನು ಮುಚ್ಚಿದೆ; ನಿನ್ನ ಮೇಲಾದರೋ ಯೆಹೋವನು ಉದಯಿಸುವನು, ಆತನ ತೇಜಸ್ಸು ನಿನ್ನಲ್ಲಿ ಕಾಣಿಸುವದು. ಜನಾಂಗಗಳು ನಿನ್ನ ಬೆಳಕಿಗೆ ನೆರೆಯುವವು, ಅರಸರು ನಿನ್ನಲ್ಲಿನ ಉದಯ ಪ್ರಕಾಶಕ್ಕೆ ಬರುವರು** (ಯೆಶಾ. 60:1–3). ಇವತ್ತು ನೀವು ಕರ್ತನಾದ ಯೇಸುಕ್ರಿಸ್ತನಿಗಾಗಿ ಎದ್ದು ಪ್ರಕಾಶಿಸಬೇಕೆಂಬ ಆ ತವಕ ನಿಮ್ಮೊಳಗೆ ಇರುವುದಾದರೆ ಅದಕ್ಕೆ ಮಾರ್ಗ ಪ್ರಾರ್ಥನೆಯೇ ಆಗಿದೆ. ಪ್ರಾರ್ಥಿಸುವವರ ಮುಖವು, ಸೇವೆಯು, ಜೀವಿತವು ಪ್ರಕಾಶಿಸುವಂಥದು ಆಗಿದೆ. **ಎಲೈ (ಇಸ್ರಾಯೇಲೇ), [ಅವನಂತೆ ನೀನೂ] ನಿನಗೆ ಗೊತ್ತಿಲ್ಲದ ಜನಾಂಗವನ್ನು ನಿನ್ನ ಅಧೀನಕ್ಕೆ ಕರೆಯುವಿ, ಇಸ್ರಾಯೇಲಿನ ಸದಮಲಸ್ವಾಮಿ ಎನ್ನಿಸಿಕೊಳ್ಳುವ ನಿನ್ನ ದೇವರಾದ ಯೆಹೋವನು ನಿನಗೆ ವೈಭವ ಕೊಟ್ಟಿರುವುದನ್ನು ನೋಡಿ ನಿನ್ನನ್ನು ತಿಳಿಯದ ಜನಾಂಗವು ನಿನ್ನ ಆಶ್ರಯಕ್ಕೆ ಓಡಿಬರುವದು** (ಯೆಶಾ. 55:5).

ಕರ್ತನಾದ ಯೇಸುಕ್ರಿಸ್ತನ ಬಳಿಗೆ ಬರುವ ಪ್ರತಿಯೊಬ್ಬರನ್ನು ತಳ್ಳಿಬಿಡುವ ದೇವರಲ್ಲ ನಿಮ್ಮ ಸಮಸ್ಯೆ, ಸಂಕಟ, ರೋಗ, ವೇದನೆ, ಹಿಂಸೆ, ಕಷ್ಟ ಇದನ್ನೆಲ್ಲಾ ಅರಿತಿರುವ ದೇವರಾಗಿದ್ದಾನೆ. **ನಿಜವಾದ ಬೆಳಕು ಲೋಕಕ್ಕೆ ಬರುವದಾಗಿತ್ತು; ಆ ಬೆಳಕೇ ಪ್ರತಿ ಮನುಷ್ಯನಿಗೂ ಬೆಳಕನ್ನು ಕೊಡುವಂಥದು** (ಯೋಹಾ. 1:9). ಇವತ್ತು ಈ ನಿಜವಾದ ಬೆಳಕನ್ನು ಆತುಕೊಳ್ಳುವಿರಾದರೆ ಆತನು ನಿಮ್ಮ ಜೀವಿತವನ್ನು ಪ್ರಕಾಶಗೊಳಿಸುವನು. ಕರ್ತನಾದ ಯೇಸುಕ್ರಿಸ್ತನು ಹೇಳಿದನು **ನಾನೇ ಲೋಕಕ್ಕೆ ಬೆಳಕು; ನನ್ನನ್ನು ಅನುಸರಿಸುವವನು ಕತ್ತಲೆಯಲ್ಲಿ ನಡೆಯದೆ ಜೀವಕೊಡುವ ಬೆಳಕನ್ನು ಹೊಂದಿದವನಾಗಿರುವನು ಎಂದು ಹೇಳಿದನು** (ಯೋಹಾ. 8:12). ಸೂರ್ಯನಿಂದ ಬೆಳಕನ್ನುಪಡೆದು ರಾತ್ರಿಯಲ್ಲಿ ಚಂದ್ರನು ಪ್ರಕಾಶಿಸುವಂತೆ, ನೀತಿ ಸೂರ್ಯನಾದ ಕರ್ತನ ಬಳಿ ನೀವು ಬೆಳಕನ್ನು ಪಡೆದು ಅಂಧಕಾರದಿಂದ ತುಂಬಿರುವ ಪ್ರಪಂಚಕ್ಕೆ ದೈವೀಕ ಬೆಳಕನ್ನು ಪ್ರತಿಬಿಂಬಿಸಬೇಕು. **ನೀವು ಲೋಕಕ್ಕೆ ಬೆಳಕಾಗಿದ್ದೀರಿ. ಗುಡ್ಡದ ಮೇಲೆ ಕಟ್ಟಿರುವ ಊರು ಮರೆಯಾಗಿರಲಾರದು** (ಮತ್ತಾ. 5:14) ಇಂದು ಇರುಳು ತುಂಬಿರುವ ಹೃದಯಗಳಲ್ಲಿ ದೈವೀಕ ಬೆಳಕನ್ನು ಮೂಡಿಸಲು ಕರ್ತನು ಈ ಲೋಕದಲ್ಲಿ ನಿಮ್ಮನ್ನು ಇಟ್ಟಿರುವನು.

ಸತ್ಯವೇದದಲ್ಲಿ ಅನೇಕರು ದೇವರಿಗಾಗಿ ಪ್ರಕಾಶಿಸಿದರು. ಮೋಶೆ ಯೆಹೋವನ ಸಂಗಡ ಸಂಭಾಷಿಸಿದ್ದರಿಂದ ಅವನ ಮುಖವು ಪ್ರಕಾಶ ಮಾನವಾಗಿತ್ತು. ಆದರೆ ಆ ಸಂಗತಿ ಅವನಿಗೆ ತಿಳಿಯಲಿಲ್ಲ. ಮೋಶೆಯು ಸೀನಾಯ್ ಬೆಟ್ಟದಲ್ಲಿ ನಾಲ್ವತ್ತು ದಿವಸ ಕಳೆದಾಗ ದೇವರ ಸ್ವರ ಕೇಳಿದನು, ದೇವರ ಪ್ರಸನ್ನತೆ ಆತನನ್ನು ಆವರಿಸಿಕೊಂಡಿತು. ಇಸ್ರಾಯೇಲ್ಯರ ಬಳಿಗೆ ಬಂದಾಗ ಮೋಶೆಯ ಮುಖವು ಪ್ರಕಾಶಿಸುವುದನ್ನು ಕಂಡರು (ವಿಮೋ. 34:28–29)

**ಯೋಹಾನನು ಉರಿಯುವ ದೀಪದೋಪಾದಿಯಲ್ಲಿ ಪ್ರಕಾಶಿಸಿದನು. ಅವನು ಕೊಡುವ ಬೆಳಕಿನಲ್ಲಿ ಸ್ವಲ್ಪಕಾಲ ವಿನೋದಗೊಳ್ಳುವದಕ್ಕೆ ಮನಸ್ಸುಮಾಡಿದಿರಿ** (ಯೋಹಾ. 5:35). ಸ್ನಾನಿಕನಾದ ಯೋಹಾನನು ಉರಿಯುವ ದೀಪದೋಪಾದಿಯಲ್ಲಿ ಪ್ರಕಾಶಿಸಿದನು. ಆತನು ತನ್ನ ಕರೆಯುವಿಕೆಯಲ್ಲಿ ದೃಢವಾಗಿ ನಿಂತದ್ದರಿಂದ ಜನರು ಆತನ ಬಳಿಗೆ ಬಂದವರೆಲ್ಲಾ ತಮ್ಮ ಪಾಪಗಳಿಗೆ ಪಶ್ಚಾತ್ತಾಪಪಟ್ಟು ದೇವರ ಕಡೆಗೆ ತಿರುಗಿಕೊಂಡರು. ಇದು ಹೇಗೆ ಸಾಧ್ಯವಾಯಿತು? ಕರ್ತನು ಹೇಳುವವರೆಗೂ ತನ್ನನ್ನು ಪ್ರಸಿದ್ಧಿಪಡಿಸಿಕೊಳ್ಳದೆ ಪ್ರಾರ್ಥನೆಯೆಂಬ ಅಡವಿಯಲ್ಲಿ ತನ್ನನ್ನು ಮರೆಮಾಡಿಕೊಂಡನು. ವಾಕ್ಯವು ಸ್ಪಷ್ಟವಾಗಿ ಹೇಳುತ್ತದೆ, ಕರ್ತನು ಸ್ತ್ರೀಯರಲ್ಲಿ ಹುಟ್ಟಿದವರೊಳಗೆ ಸ್ನಾನಿಕನಾದ ಯೋಹಾನನಿಗಿಂತ

ನನ್ನ ಆತ್ಮವನ್ನು ನಿಮ್ಮಲ್ಲಿ ನೆಲೆಸಿರುವಂತೆ ಅನುಗ್ರಹಿಸಿ ನೀವು ನನ್ನ ನಿಯಮಗಳನ್ನು ಅನುಸರಿಸುವ ಹಾಗೆ ಮಾಡುವೆನು (ಯೆಹೆ. 36:27).

ದೊಡ್ಡವನು ಎದ್ದಿಲ್ಲ ಎಂದು ಸಾಕ್ಷಿಕೊಟ್ಟನು (ಮತ್ತಾ. 11:11).

ಆತನ ಮುಖವು ಸೂರ್ಯನ ಹಾಗೆ ಪ್ರಕಾಶಿಸಿತು; ಆತನ ವಸ್ತ್ರಗಳು ಬೆಳಕಿನಂತೆ ಬೆಳ್ಳಗಾದವು (ಮತ್ತಾ. 17:2). ಯೇಸುಕ್ರಿಸ್ತನು ಬೆಟ್ಟವನ್ನೇರಿ ಪ್ರಾರ್ಥಿಸಿದಾಗ, ಆತನ ಮುಖವು ಸೂರ್ಯನಂತೆ ಪ್ರಕಾಶಿಸಿದ್ದನ್ನು ಆತನೊಂದಿಗೆ ಹೋಗಿದ್ದ ಆತನ ಶಿಷ್ಯರಾದ ಪೇತ್ರ, ಯಾಕೋಬ, ಯೋಹಾನರು ಕಂಡು ಬೆರಗಾದರು. 4 ಸುವಾರ್ತೆಗಳಲ್ಲಿ ಕರ್ತನಾದ ಯೇಸುಕ್ರಿಸ್ತನಿಗೆ ಸಂಬಂಧಪಟ್ಟಂತೆ ಪ್ರಾರ್ಥನೆ 25 ಸಾರಿ ಹೇಳಲ್ಪಟ್ಟಿದೆ. ಕರ್ತನಾದ ಯೇಸುಕ್ರಿಸ್ತನು ಈ ಲೋಕದಲ್ಲಿ ಸಂಪೂರ್ಣ ದೇವರು ಹಾಗೂ ಸಂಪೂರ್ಣ ಮನುಷ್ಯನಾಗಿದ್ದನು. ಆತನಿಗೆ ತನ್ನ ಬಲಹೀನತೆಯ ಕುರಿತಾಗಿ ಅರಿವು ಇತ್ತು. ಅದಕ್ಕೆ ಕ್ರಿಸ್ತನು ಎಲ್ಲಿಗೆ ಹೋದರೂ ಏನ್ನನ್ನು ಮಾಡುವುದಕ್ಕಿಂತ ಮುಂಚೆ, ಮಾಡಿದ ನಂತರವಾಗಿ ಪ್ರಾರ್ಥಿಸುತ್ತಿದ್ದನು, ಆತನು ಎಲ್ಲಿಗೆ ಹೋದರು ವಿಶ್ರಮಿಸುವದಕ್ಕೆ ಸ್ಥಳ ಹುಡುಕುತ್ತಿರಲಿಲ್ಲ ಬದಲಾಗಿ ಪ್ರಾರ್ಥಿಸುವುದಕ್ಕೆ ಸ್ಥಳ ಹುಡುಕುತ್ತಿದ್ದನು. ಇದನ್ನು ಓದುವ ಸೇವಕರೇ, ನಾಯಕರೇ, ವಿಶ್ವಾಸಿಯೇ ನಮ್ಮ ಕರ್ತನು ನಮಗೆ ಒಳ್ಳೆ ಮಾದರಿಯಾಗಿದ್ದಾನೆ. ಇವತ್ತು ನಾವು ಎಷ್ಟರವರು ಕ್ರಿಸ್ತನು 33 1/2 ವರ್ಷಗಳ ಕಾಲ ಈ ಲೋಕದಲ್ಲಿ ಜೀವಿಸಿದರು. ಅದರಲ್ಲಿ 3 1/2 ವರ್ಷಗಳು ಮಾತ್ರ ಸೇವೆ ಸಲ್ಲಿಸಿದರು. ಆದರೆ ಕರ್ತನ ಪ್ರಿಯ ಶಿಷ್ಯನಾಗಿರುವ ಯೋಹಾನನು ತಾನು ಬರೆದ ಸುವಾರ್ತೆಯ ಮುಕ್ತಾಯಕ್ಕೆ ಬರುವಾಗ ಹೇಳುವಂಥ ಮಾತು. ಇದಲ್ಲದೆ ಯೇಸು ಮಾಡಿದ್ದು ಇನ್ನೂ ಬಹಳವಿದೆ; ಅದನ್ನೆಲ್ಲಾ ಒಂದೊಂದಾಗಿ ಬರೆಯುವದಾದರೆ ಬರೆಯಬೇಕಾದ ಪುಸ್ತಕಗಳನ್ನು ಲೋಕವೇ ಹಿಡಿಸದೆ ಹೋದಿತೆಂದು ನಾನು ನೆನಸುತ್ತೇನೆ (ಯೋಹಾ. 21:25). ಎಂಥಾ ಮಹಿಮೆಯ ಸೇವೆ ಕ್ರಿಸ್ತನು ಪ್ರಾರ್ಥಿಸುವುದಕ್ಕೆ 3 ಕಾರಣವಿದೆ.

* ಹೆಚ್ಚಳಪಡುವಿಕೆಯ ಶೋಧನೆಯ ಎಚ್ಚರಿಕೆಯ ಕುರಿತಾಗಿ
* ಮಾಡಿದ ಕೃತ್ಯಗಳ ಸಂತೃಪ್ತಿ ಹೊಂದಬಾರದು
* ತಂದೆ ಬಳಿ ಕಾಯುತ್ತಾ ಇನ್ನು ಅಧಿಕವಾದ ಕಾರ್ಯವನ್ನು ಮಾಡುವುದಕ್ಕೆ ಶಕ್ತಿಬೇಕು ಎಂದು.

ತನಗೆ ಕೊಡಲ್ಪಟ್ಟ ಕಾಲ ಸ್ವಲ್ಪವಾದರೂ ಸೇವೆಯು ದೊಡ್ಡದಾಗಿತ್ತು. ಅದು ಮಹಿಮೆಯಿಂದ ಕೂಡಿತ್ತು. ಅದು ತಂದೆಯನ್ನು ಸಂತೋಷಗೊಳಿಸಿತ್ತು. ನಮ್ಮ ಅತಿ ದೊಡ್ಡ ಅವಶ್ಯಕತೆ ಆತನ ಪಾದದ ಬಳಿ ಕುಳಿತುಕೊಳ್ಳುವಂಥದು ಆಗಿದೆ. ಪ್ರಾರ್ಥನೆ ಎಂಬುದು ಮಾನುಷಿಕವಾದ ನಿಸ್ಸಾಯಕತೆಯನ್ನು ಪ್ರಕಟಿಸುವಂಥದ್ದು ಆಗಿದೆ. ಮರಿಯಳು ದೇವರ ಬಳಿ ಕುಳಿತು ದೇವರ ಚಿತ್ತ ಕಲಿತುಕೊಂಡಳು **"ಯಜ್ಞನೈವೇದ್ಯಗಳು ನಿನಗೆ ಇಷ್ಟವಲ್ಲ; ಸರ್ವಾಂಗಹೋಮಗಳನ್ನಾಗಲಿ ದೋಷಪರಿಹಾರಕ ಯಜ್ಞಗಳನ್ನಾಗಲಿ ನೀನು ಅಪೇಕ್ಷಿಸಲಿಲ್ಲ. ಆದರೆ ಶ್ರವಣಶಕ್ತಿಯನ್ನು ನನಗೆ ಅನುಗ್ರಹಿಸಿದಿ. ಆಗ ನಾನು ಇಗೋ ಇದ್ದೇನೆ; ನನ್ನ ಕರ್ತವ್ಯವು ಗ್ರಂಥದ ಸುರಳಿಯಲ್ಲಿ ಬರೆದದೆ. ನನ್ನ ದೇವರೇ, ನಿನ್ನ ಚಿತ್ತವನ್ನು ಅನುಸರಿಸುವದೇ ನನ್ನ ಸಂತೋಷವು; ನಿನ್ನ ಧರ್ಮೋಪದೇಶವು ನನ್ನ ಅಂತರಂಗದಲ್ಲಿದೆ ಅಂದೆನು"** (ಕೀರ್ತ. 40:6–8).

**"ಆಗ ಹಿರೀಸಭೆಯಲ್ಲಿ ಕೂತಿದ್ದವರೆಲ್ಲರು ಅವನನ್ನು ದೃಷ್ಟಿಸಿ ನೋಡಿ ಅವನ ಮುಖವು ದೇವದೂತನ ಮುಖದಂತೆ ಇರುವದನ್ನು ಕಂಡರು"** (ಅ.ಕೃ. 6:15). **"ಅಪೋಸ್ತಲರು ಪ್ರಾರ್ಥನೆಮಾಡಿ ಅವರ ಮೇಲೆ ಕೈಗಳನ್ನಿಟ್ಟು ನೇಮಿಸಿದರು. ಮತ್ತು ದೇವರ ವಾಕ್ಯವು ಪ್ರಬಲವಾಯಿತು. ಶಿಷ್ಯರ ಸಂಖ್ಯೆಯು ಯೆರೂಸಲೇಮಿನಲ್ಲಿ ಬಹಳವಾಗಿ ಹೆಚ್ಚುತ್ತಾ ಬಂತು. ಯಾಜಕರಲ್ಲಿಯೂ ಬಹುಜನರು ಕ್ರಿಸ್ತನಂಬಿಕೆಗೆ ಒಳಗಾಗುತ್ತಾ ಇದ್ದರು. ಸ್ತೆಫನನು ದೇವರ ಕೃಪೆಯಿಂದಲೂ ಬಲದಿಂದಲೂ ತುಂಬಿದವನಾಗಿ ಜನರಲ್ಲಿ ಮಹಾ ಅದ್ಭುತಕಾರ್ಯಗಳನ್ನೂ ಸೂಚಕಕಾರ್ಯಗಳನ್ನೂ ಮಾಡುತ್ತಾ ಇದ್ದನು" ಆದರೆ ಲಿಬೆರ್ತೀನರೆಂಬವರ ಸಮಾಜದವರಲ್ಲಿಯೂ ಕುರೇನ್ಯದವರ ಮತ್ತು ಅಲೆಕ್ಸಾಂದ್ರಿಯದವರ ಸಮಾಜದವರಲ್ಲಿಯೂ ಕಿಲಿಕ್ಯ ಆಸ್ಯ ಸೀಮೆಗಳಿಂದ ಬಂದವರ ಸಮಾಜದವರಲ್ಲಿಯೂ ಕೆಲವರು ಎದ್ದು ಸ್ತೆಫನನ ಸಂಗಡ ತರ್ಕಮಾಡುತ್ತಾ ಇರಲು ಅವನ ಮಾತಿನಲ್ಲಿ ಕಂಡುಬಂದ ಜ್ಞಾನವನ್ನೂ ಪವಿತ್ರಾತ್ಮಶಕ್ತಿಯನ್ನೂ ಎದುರಿಸಲಾರದೆ ಹೋದರು.** (ಅ.ಕೃ. 6:6–10). ಸ್ತೆಫನನ ಅಂತರ್ಯದಲ್ಲಿ, ಮುಖದಲ್ಲಿ ಕತ್ತಲೆ ಇರಲಿಲ್ಲ, ಅಂಧಕಾರ ಶಕ್ತಿಗಳಿರಲಿಲ್ಲ ಕಾರಣ ಮಹಿಮೆಯ ಯೇಸುಕ್ರಿಸ್ತನು ಆತನಲ್ಲಿ ಇದ್ದನು. ಸ್ತೆಫನನ ಅಂತರ್ಯವೆಂಬ ಪಾತ್ರೆಯು ತೇಜೋಮಯವಾದ ಪವಿತ್ರಾತ್ಮನಿಂದ ತುಂಬಲ್ಪಟ್ಟಿತು. ಇದರ ನಿಮಿತ್ತವಾಗಿ ಮೇಲ್ಕಂಡ ವಾಕ್ಯದಲ್ಲಿ ಓದಿದ ಪ್ರಕಾರವಾಗಿ ಯಾವ ಜ್ಞಾನಿಗಳು ಆತನ ಮುಂದೆ ನಿಲ್ಲಲು ಸಾಧ್ಯವಾಗಲಿಲ್ಲ **"ನೀವು ಕ್ರಿಸ್ತನ ಹೆಸರಿನ ನಿಮಿತ್ತ ನಿಂದೆಗೆ ಗುರಿಯಾದರೆ ಧನ್ಯರೇ; ತೇಜೋಮಯವಾದ**

ನಾನು ನಿನ್ನ ಸಂಗಡ ಇದ್ದು ನೀನು ಹೋಗವ ಎಲ್ಲಾ ಸ್ಥಳಗಳಲ್ಲಿ ನಿನ್ನನ್ನು ಕಾಪಾಡಿ
ತಿರುಗಿ ಈ ದೇಶಕ್ಕೆ ಬರಮಾಡುತ್ತೇನೆ (ಆದಿ. 28:15).

**ಆತ್ಮನಾಗಿರುವ ದೇವರಾತ್ಮನು ನಿಮ್ಮಲ್ಲಿ ನೆಲೆಗೊಂಡಿದ್ದಾನಲ್ಲಾ"** (1 ಪೇತ್ರ. 4:14). **"ಆಗ ಅವನು ನನಗೆ ಪ್ರತ್ಯುತ್ತರವಾಗಿ ಹೀಗೆ ಹೇಳಿದನು ಪರಾಕ್ರಮದಿಂದಲ್ಲ, ಬಲದಿಂದಲ್ಲ, ನನ್ನ ಆತ್ಮದಿಂದಲೇ ಎಂಬದು ಸೇನಾಧೀಶ್ವರ ಯೆಹೋವನ ನುಡಿ ಎಂಬೀ ಮಾತನ್ನು ಯೆಹೋವನು ಜೆರುಬ್ಬಾಬೆಲನಿಗೆ ದಯಪಾಲಿಸಿದ್ದಾನೆ"** (ಜೆಕರ್. 4:6). ಅವರು ಅವನಲ್ಲಿ ಕಂಡು ಬಂದ ದೈವೀಕ ಜ್ಞಾನ ಹಾಗೂ ಪವಿತ್ರಾತ್ಮನ ಶಕ್ತಿಯನ್ನು ಎದುರಿಸಲಾರದೆ ಹೋದರು. ಪ್ರಿಯರೇ, ನೀವು ಯಾವುದನ್ನು ಪಡೆದುಕೊಂಡರೂ, ಪಡೆದುಕೊಳ್ಳದೆ ಹೋದರು, ನೀವು ಪವಿತ್ರಾತ್ಮನನ್ನು ಪಡೆದುಕೊಳ್ಳಿರಿ. ಪವಿತ್ರಾತ್ಮನಿಲ್ಲದಿದ್ದರೆ ಏನನ್ನು ಸಾಧಿಸಲಿಕ್ಕೆ ಸಾಧ್ಯವಿಲ್ಲ. ಎಫೆ. 3:16 ವಾಕ್ಯದ ಪ್ರಕಾರವಾಗಿ ನೀವು ದೇವರಾತ್ಮನ ಮೂಲಕ ಅಂತರ್ಯದಲ್ಲಿ ವಿಶೇಷಬಲ ಹೊಂದಿದವರಾಗುತ್ತೀರಿ. ಪವಿತ್ರಾತ್ಮನು ನಿಮ್ಮೊಳಗೆ ಬರುವಾಗ ನೀವು ಅಸಾಧರಣ ವ್ಯಕ್ತಿಗಳಾಗುತ್ತೀರಿ. ಆತನ ನಡಿಸುವಿಕೆಗೆ ನಿಮ್ಮನ್ನು ಬಿಟ್ಟುಕೊಡಿ ಆತನು ನಿಮ್ಮೊಳಗೆ ಮಾಡುವ ಬದಲಾವಣೆ ಮತ್ತು ನಿಮ್ಮ ಮೂಲಕ ಅನೇಕರಲ್ಲಿ ಮಾಡುವ ಕಾರ್ಯವನ್ನು ಮತ್ತು ಆ ಹರಿಯುವಿಕೆಯನ್ನು ಕಾಣುವಿರಿ. **"ಒಂದು ನದಿ ಅದೆ; ಅದರ ಕಾಲಿವೆಗಳು ಪರಾತ್ಪರನ ಪರಿಶುದ್ಧನಿವಾಸಸ್ಥಾನವಾಗಿರುವ ದೇವನಗರವನ್ನು ಸಂತೋಷಪಡಿಸುತ್ತವೆ"** (ಕೀರ್ತ. 46:4). ಭಕ್ತನಾದ ದಾವೀದನು ಹೇಳುತ್ತಾನೆ, **"ವೈರಿಗಳ ಮುಂದೆಯೇ ನೀನು ನನಗೋಸ್ಕರ ಔತಣವನ್ನು ಸಿದ್ಧಪಡಿಸುತ್ತೀ; ನನ್ನ ತಲೆಗೆ ತೈಲವನ್ನು ಹಚ್ಚಿಸುತ್ತೀ. ನನ್ನ ಪಾತ್ರೆಯು ತುಂಬಿ ಹೊರಸೂಸುತ್ತದೆ"** (ಕೀರ್ತ. 23:5). ಕರ್ತನಾದ ಕ್ರಿಸ್ತ ಯೇಸುವಿನಲ್ಲಿದ್ದುಕೊಂಡವನಾಗಿ ಹೇಳುತ್ತಿದ್ದೇನೆ, **"ನೀವು ದೇವರಿಗಾಗಿ ಪ್ರಕಾಶಿಸಬೇಕಾದರೆ ಆದದರಿಂದ ನಿದ್ರೆ ಮಾಡುವವನೇ, ಎಚ್ಚರವಾಗು; ಸತ್ತವರನ್ನು ಬಿಟ್ಟು ಏಳು! ಕ್ರಿಸ್ತನು ನಿನಗೆ ಪ್ರಕಾಶ ಕೊಡುವನು ಎಂದು ಹೇಳಿಯದೆ"** (ಎಫೆ. 5:14). ಇವತ್ತು ಆತ್ಮೀಕ ನಿದ್ರೆಯಿಂದ, ರಹಸ್ಯಪಾಪದಿಂದ, ಎಲ್ಲಾ ಕತ್ತಲೆಯ ಕೃತ್ಯದಿಂದ, ಹೊರಬನ್ನಿರಿ. ಸತ್ತವರ ಒಡನಾಟವನ್ನು ಬಿಟ್ಟುಬಿಡಿರಿ, ದೈವೀಕ ಮಕ್ಕಳ ಅನ್ಯೋನ್ಯತೆಯನ್ನು ಹೊಂದಿಕೊಳ್ಳಿರಿ, ಎಲ್ಲಾ ಧೂಳನ್ನೂ ಝಾಡಿಸಿ. ಹೀಗೆ ಮಾಡುವಾಗ ನೀವು ದೇವರಿಗಾಗಿ ಪ್ರಕಾಶಿಸಬಹುದು. ಕರ್ತನು ನಿಮ್ಮನ್ನು ಉಪಯೋಗಿಸುವಾಗ **"ಹೀಗಿರುವದರಿಂದ ನಾನು ಈ ಜನರ ಮಧ್ಯದಲ್ಲಿ ಅಧಿಕಾಶ್ಚರ್ಯವೂ ಅದ್ಭುತವೂ ಆದ ಕಾರ್ಯವನ್ನು ಇನ್ನು ಮಾಡುವೆನು; ಇವರ ಜ್ಞಾನಿಗಳ ಜ್ಞಾನವು ಅಳಿಯುವದು, ವಿವೇಕಿಗಳ ವಿವೇಕವು ಅಡಗುವದು ಎಂದು ಹೇಳಿದನು"** (ಯೆಶಾ. 29:14). **"ನೀತಿವಂತರ ಮಾರ್ಗವು ಮಧ್ಯಾಹ್ನದ ವರೆಗೂ ಹೆಚ್ಚುತ್ತಾ ಬರುವ ಬೆಳಗಿನ ಬೆಳಕಿನಂತಿದೆ"** (ಜ್ಞಾನೋ. 4:18). ಇಂದು ನಿಮ್ಮ ಜೀವಿತ, ಸಮಸ್ಯೆ, ಹೋರಾಟ, ಕಷ್ಟಗಳೆಂಬ, ಕತ್ತಲೆಯಿಂದ ತುಂಬಿದೆಯಾ? ಕರ್ತನು ಹೇಳಿದಂತೆ ಧೂಳನ್ನು ಝಾಡಿಸಿ ಎದ್ದೇಳಿ, ಕ್ರಿಸ್ತನ ಪ್ರಕಾಶವು ನಿಮ್ಮಲ್ಲಿ ಪ್ರಕಟವಾಗುತ್ತದೆ.

ಪ್ರಿಯರೇ, ಇದನ್ನು ಮುಂದಿನ ಸಂಚಿಕೆಯಲ್ಲಿ ಮುಂದುವರಿಸಲು ಇಷ್ಟವುಳ್ಳವನಾಗಿದ್ದೇನೆ. ಕರ್ತನು ಇನ್ನು ಹೆಚ್ಚಿನ ಸಂಗತಿಗಳನ್ನು ಆಳವಾದ ವಾಕ್ಯದ ಗೂಡಾರ್ಥಗಳನ್ನು, ಮರ್ಮಗಳನ್ನು ಪರಲೋಕದ ಆ ಮಹಿಮೆಯ ಸಂಗತಿಗಳನ್ನು ಪ್ರಕಟಿಸುವಂಥ ದೈವೀಕ ಜ್ಞಾನದಿಂದ ತುಂಬಿಸುವಂಥ ಕರ್ತನಾದ ಯೇಸುಕ್ರಿಸ್ತನ ಸೇವೆಯಲ್ಲಿ ಪ್ರಯಾಸಪಡುತ್ತಿರುವ ನಿಮ್ಮೆಲ್ಲರ ಪ್ರೀತಿಯ ಸಹೋದರನು ಕೇಳಿಕೊಳ್ಳುವ ಪ್ರಾರ್ಥನೆಯಾಗಿದೆ.

ಕರ್ತನು ತಾನೇ ನಿಮ್ಮೆಲ್ಲರನ್ನು ಹೇರಳವಾಗಿ ಆಶೀರ್ವಾದಿಸಲಿ, ಆಮೆನ್.

---

ನಗೆ ಹನಿ

## ಆಹಾ, ರಂಗ

ರಂಗನು ನೆಲದ ಮೇಲೆ ಬಿದ್ದು ಹೊರಳಾಡುತ್ತಿದ್ದನು. ಅದೇ ಸಮಯಕ್ಕೆ ಅಲ್ಲಿಗೆ ಬಂದ ಗಂಗನು ಗಾಬರಿಯಿಂದ ರಂಗನು ಹೊರಳಾಡುತ್ತಿರುವುದಕ್ಕೆ ಕಾರಣವನ್ನು ಕೇಳಿದನು.

ರಂಗ : "ಡಾಕ್ಟರ್ ನನಗೆ ಔಷಧಿ ಕೊಡುವಾಗ ಕುಲುಕಿಸಿ ನಂತರ ಕುಡಿಯಿರಿ ಎಂದು ಹೇಳಿದ್ದರು. ನಾನು ಮರೆತು ಹಾಗೆಯೇ ಕುಡಿದು ಬಿಟ್ಟೆ, ಅದಕ್ಕೆ ಹೊಟ್ಟೆಯಲ್ಲಿ ಇರುವ ಔಷಧಿ ಅಲ್ಲಾಡಲಿ ಎಂದು ಹೊರಳಾಡುತ್ತಿದ್ದೇನೆ".

ಹೆದರಬೇಡ, ನಿನಗೆ ಆಶಾಭಂಗವಾಗುವದಿಲ್ಲ, ನಾಚಿಕೆಪಡದಿರು, ನಿನಗೆ ಆಶಾಭಂಗವಾಗದು (ಯೆಶಾ. 54:4).

# ನೀತಿವಂತನ ಆಶೀರ್ವಾದಗಳು

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

1) **ಆದರೆ ದೀನರು ದೇಶವನ್ನು ಅನುಭವಿಸುವರು. ಅವರು ಮಹಾಸೌಖ್ಯದಿಂದ ಆನಂದಿಸುವರು** (ಕೀರ್ತ. 37:11). ನೀತಿವಂತನಿಗೆ ಕೊಟ್ಟಂತಹ ಇನ್ನೊಂದು ಹೆಸರು ದೀನನು. ದೀನನಿಗೆ ಇನ್ನೊಂದು ಅರ್ಥ ತಗ್ಗಿಸಿಕೊಂಡವನು. ಅನೇಕ ಜನರನ್ನು ನಾನು ನೋಡಿದ್ದೇನೆ. ಎಕರೆಗಟ್ಟಲೆ ಭೂಮಿಯಿದೆ, ದೊಡ್ಡ ಮನೆಯಿದೆ ಆದರೆ ಆ ಭೂಮಿಯ ಒಳ್ಳೆಯದನ್ನು ಅನುಭವಿಸುವಂತಹ ಅವಕಾಶ ಇಲ್ಲ. ಮೇಲಿನ ವಾಕ್ಯದಲ್ಲಿ 2 ವಿಧವಾದ ಆಶೀರ್ವಾದಗಳಿವೆ.

1. ದೇಶವನ್ನು ಅನುಭವಿಸುವುದು
2. ಮಹಾ ಸೌಖ್ಯದಿಂದ ಆನಂದಿಸುವಂತದ್ದು.

ನಾವು ದೇಶದ ಆಶೀರ್ವಾದಗಳನ್ನು ಅನುಭವಿಸಬೇಕಾದರೆ ದೀನರಾಗಬೇಕು. ದೀನರಾದರೆ ಮಾತ್ರ ಕರ್ತನ ಉನ್ನತವಾದ ಆಶೀರ್ವಾದಗಳಿಗೆ ಪಾತ್ರರಾಗುವೆವು. ಮತ್ತಾ. 5:5 **ಶಾಂತರು ಧನ್ಯರು ಅವರು ಭೂಮಿಗೆ ಬಾಧ್ಯರಾಗುವರು.** ಎಷ್ಟೋ ಕುಟುಂಬಗಳಲ್ಲಿ ಇಂದು ಆಸ್ತಿಗಾಗಿ ಜಗಳ ಇರುವುದರಿಂದ ಕುಟುಂಬದಲ್ಲಿ ಸಮಾಧಾನ ಇಲ್ಲ, ಕುಟುಂಬದಲ್ಲಿ ಐಕ್ಯತೆ ಇಲ್ಲ, ಸ್ಥಳದ ಮೇಲೆ ವ್ಯಾಜ್ಯ ಇರುವುದರಿಂದ ಏನು ಅಭಿವೃದ್ಧಿ ಮಾಡುವ ಹಾಗಿಲ್ಲ. ಶಾಂತಿ ಸಮಾಧಾನ ಇಲ್ಲದೆ ಜೀವನ ಮಾಡುವಂತಹ ಅನುಭವವನ್ನು ಕಾಣಬಹುದು. ಒಬ್ಬರಿಗೊಬ್ಬರು ಕ್ಷಮಿಸಲು ಸಿದ್ಧರಿಲ್ಲ. ಕ್ಷಮಿಸಬೇಕಾದರೆ, ಪ್ರೀತಿಸಬೇಕಾದರೆ ದೀನತೆ ಬೇಕು. ನನಗೆ ಗೊತ್ತಿರುವ ಒಬ್ಬ ಅಂಕಲ್ ಇದ್ದಾರೆ. (ಅವರು ಈಗ ದೇವ ಸೇವಕರು) ಅವರ ತಂದೆ ತಾಯಿಗೆ ಪಿತ್ರಾರ್ಜಿತವಾದ ಅನೇಕ ಆಸ್ತಿ ಇತ್ತು. ಇವರು ತಂದೆ ತಾಯಿಗೆ 8 ಜನ ಮಕ್ಕಳು. 4 ಹೆಣ್ಣು, 4 ಗಂಡು 3 ಜನ ಗಂಡು ಮಕ್ಕಳಿಗೆ ಈಗಾಗಲೇ ತಂದೆಯ ಆಸ್ತಿಯಿಂದ ಪಾಲು ಸಿಕ್ಕಿತು. ಸೇವಕರು ಕೊನೆಯವರಾದ್ದ ಕಾರಣ ಅವರು ಇರುವ ತಂದೆಯ ಮೂಲ ಮನೆಯನ್ನು ಅವರಿಗೆ ಕೊಡಬೇಕು ಎಂದು ತಂದೆ ತೀರಿ ಹೋಗುವ ಮುಂಚೆ ಹೇಳಿದ್ದರು. 4 ಹೆಣ್ಣು ಮಕ್ಕಳು ಚಿಕ್ಕ ತಮ್ಮನಿಗೆ ತಮಗೆ ಬರುವ ಪಾಲನ್ನು ಕೊಡಲು ಸಿದ್ಧರಾಗಿದ್ದರು ಕಾನೂನು ಪ್ರಕಾರ.

2) **ರಕ್ಷಣೆಯ ವಸ್ತ್ರ:** ಯೋಬ. 29:14ರಲ್ಲಿ ನಾನು ಧರ್ಮವನ್ನು ಧರಿಸಿಕೊಂಡೆನು, ಧರ್ಮವು ನನ್ನನ್ನು ಧರಿಸಿತು. ನನ್ನ ನ್ಯಾಯವೇ ನನಗೆ ನಿಲುವಂಗಿಯೂ ಮುಂಡಾಸವೂ ಆಗಿತು. ನಾನು ಯೆಹೋವನಲ್ಲಿ ಪರಮಾನಂದ ಪಡುವೆನು. ನನ್ನ ಆತ್ಮವು ನನ್ನ ದೇವರಲ್ಲಿ ಹಿಗ್ಗುವುದು; ವರನು ಬಾಸಿಂಗವನ್ನು ಧರಿಸಿಕೊಳ್ಳುವಂತೆಯೂ ವಧುವು ತನ್ನನ್ನು ಆಭರಣಗಳಿಂದ ಅಲಂಕರಿಸಿಕೊಳ್ಳುವ ಹಾಗೂ ಆತನು ನನಗೆ ರಕ್ಷಣೆಯೆಂಬ ವಸ್ತ್ರವನ್ನು ಹೊದಿಸಿ ಧರ್ಮವೆಂಬ ನಿಲುವಂಗಿಯನ್ನು ತೊಡಿಸಿದ್ದಾನಲ್ಲಾ (ಯೆಶಾ. 61:10).

ಧರ್ಮ ಅಂದರೆ ನೀತಿ ಎಂಬುದಾಗಿದೆ. ಕರ್ತನು ತನ್ನ ಮಕ್ಕಳಿಗಾಗಿ ಅನೇಕ ಆತ್ಮೀಕ ವಸ್ತ್ರಗಳನ್ನು ತೊಡಿಸುತ್ತಾನೆ. ಲೋಕ ಪ್ರಕಾರವಾದ ವಸ್ತ್ರಗಳೂ ಇವೆ. ಆತ್ಮೀಕವಾದ ವಸ್ತ್ರಗಳೂ ಇವೆ. ಲೋಕ ಪ್ರಕಾರವಾದ ವಸ್ತ್ರಗಳನ್ನು ಹಣಕೊಟ್ಟು ನಾವು ಕೊಂಡುಕೊಳ್ಳಬಹುದು. ಹಣ ಇರುವವರು ಒಳ್ಳೆಳ್ಳೆಯ ಬೆಲೆಬಾಳುವ ವಸ್ತ್ರಗಳನ್ನು ತಮ್ಮ ಅಂತಸ್ತಿಗೆ ಸರಿಯಾಗಿ ಧರಿಸಿಕೊಳ್ಳುತ್ತಾರೆ. ಆದರೆ ಆತ್ಮೀಕವಾದ ವಸ್ತ್ರಗಳನ್ನು ಬಡವರು, ಐಶ್ವರ್ಯವಂತರೆಂಬ ಬೇಧ ಭಾವ ಇಲ್ಲದೆ ಕರ್ತನಿಂದ ನಾವು ಪಡೆದುಕೊಳ್ಳಬಹುದು. ಒಬ್ಬ ಪಾಪಿ ಮರಣ ಹೊಂದುವ ಸಮಯದಲ್ಲಿ ಅಯ್ಯೋ ನಿರ್ವಾಣನಾಗಿದ್ದೇನಲ್ಲಾ ಎಂದು ಆಘಾತಕ್ಕೆ ಒಳಗಾಗುತ್ತಾನೆ. ಭೂಮಿಯಲ್ಲಿ ಜೀವಿಸುವಾಗ ಮನುಷ್ಯನು ಉಡುಪಿಗಳಿಗೆ ಎಷ್ಟು ಲಕ್ಷ್ಯಕೊಡುತ್ತಾನೆ. ಲೂಕ. 16:19–31 ರಲ್ಲಿ ಐಶ್ವರ್ಯವಂತ ಹಾಗೂ ಲಾಜರನ ಕುರಿತು ಓದುತ್ತೇವೆ. ಐಶ್ವರ್ಯವಂತನು ಸಕಲಾತಿಮಯವಾದ ನಾರುಮಡಿ ಮುಂತಾದ ವಸ್ತ್ರಗಳನ್ನು ಧರಿಸಿಕೊಂಡು ಪ್ರತಿದಿನವೂ ವೈಭವದೊಡನೆ ಸುಖ ಸಂತೋಷಪಡುತ್ತಿದ್ದನು ಎಂದು ವಾಕ್ಯದಲ್ಲಿ ಓದಿ ತಿಳಿದುಕೊಳ್ಳಬಹುದು. ಯೋಬನು ಈ ರೀತಿ ಹೇಳುತ್ತಾನೆ, **ಏನೂ ಇಲ್ಲದವನಾಗಿ ತಾಯಿಯ ಗರ್ಭದಿಂದ ಬಂದೆನು. ಏನೂ ಇಲ್ಲದವನಾಗಿಯೇ ಗತಿಸಿ ಹೋಗುವೆನು. ಯೆಹೋವನೇ ಕೊಟ್ಟನು. ಯೆಹೋವನೇ ತೆಗೆದುಕೊಂಡನು ಯೆಹೋವನ ನಾಮಕ್ಕೆ ಸ್ತೋತ್ರವಾಗಲಿ** (ಯೋಬ. 1:21).

ಕೆಲವು ಪದವಿಗಳಿಗೆ ಸ್ಥಾನಗಳಿಗೆ ತಕ್ಕಂತಹ ವಸ್ತ್ರಗಳನ್ನು ಸರ್ಕಾರವು ಕೊಡುತ್ತದೆ. ಒಬ್ಬ ಬ್ಯಾಂಕ್ ಮೇನೇಜರ್ ಶೂ, ಟೈ

ಶಾಶ್ವತ ಕೃಪೆಯಿಂದ ನಿನ್ನನ್ನು ಕರುಣಿಸುವೆನು ಎಂದು ನಿನ್ನ ವಿಮೋಚಕನಾದ ಯೆಹೋವನು ಅನ್ನುತ್ತಾನೆ (ಯೆಶಾ. 54:8).

ಕಟ್ಟಿಕೊಂಡಿರಬೇಕು, ಒಬ್ಬ ಪೋಲಿಸ್ ಖಾಕಿ ಬಟ್ಟೆ ಟೋಪಿ ಹಾಕಿಕೊಂಡಿರಬೇಕು, ಸೈನಿಕರಿಗೂ ಪ್ರತ್ರೇಕವಾದ ವಸ್ತ್ರಗಳಿವೆ, ಒಬ್ಬ ನ್ಯಾಯಧೀಶರಿಗೂ, ನ್ಯಾಯವಾದಿಗಳಿಗೂ ಒಂದು ವಿಧವಾದ ವಸ್ತ್ರ ಇದೆ. ಪೋಸ್ಟ್ ಮೇನ್ ಧರಿಸುವ ಬಟ್ಟೆ ಇದೆ, ನರ್ಸ್ ಧರಿಸುವ ಬಟ್ಟೆ ಇದೆ, ಅದೇ ರೀತಿಯಲ್ಲಿ ಆತ್ಮೀಕರು ಧರಿಸುವಂತಹ ಲೌಕಿಕ ಕಣ್ಣಿಗೆ ಕಾಣದಂತಹ ಆತ್ಮೀಕ ಬಟ್ಟೆಗಳೂ ಇವೆ. ಆದಿಯಲ್ಲಿ ಕರ್ತನಲ್ಲಿ ಮನುಷ್ಯನನ್ನು ಸೃಷ್ಟಿಸಿದಾಗ ಅವರಿಗೆ ಮಹಿಮೆಯನ್ನೇ ವಸ್ತ್ರವಾಗಿ ಕೊಟ್ಟಿದ್ದನು. ಆದುದರಿಂದ ಆದಾಮನೂ ಹವ್ವಳು ಸಂತೋಷದಿಂದ ದೇವರ ಮುಂದೆ ಬಂದು ಕರ್ತನ ಸನ್ನಿಧಾನದಲ್ಲಿ ನಿಂತರು. ಆದರೆ ಅವರು ಪಾಪ ಮಾಡಿದಾಗ ಕರ್ತನು ಕೊಟ್ಟ ಮಹಿಮೆಯ ವಸ್ತ್ರವನ್ನು ಸೈತಾನನು ಕಸಿದುಕೊಂಡು ಹೊರಟು ಹೋದನು. ಆಗ ಅವರು ನಿರ್ವಾಣರಾಗಿ ಕಂಡರು. ಅವಮಾನವೂ, ನಾಚಿಕೆಯೂ ಉಂಟಾಗಿ ಮರದ ಮರೆಯಲ್ಲಿ ಅಡಗಿಕೊಂಡರು. ತಮ್ಮ ನಿರ್ವಾಣವನ್ನು ಮರೆಮಾಡಿಕೊಳ್ಳಲು ಅಂಜೂರದ ಮರದ ಎಲೆಗಳನ್ನು ತೊಟ್ಟುಕೊಂಡರು. ಆದರೆ ಕರ್ತನು ಅವರಿಗೆ ಚರ್ಮದ ಉಡುಪನ್ನು ತೊಡಿಸಿದನು (ಆದಿ. 3:21). ಇಂದು ತಮ್ಮ ಪಾಪಗಳಿಗಾಗಿ ಪಶ್ಚಾತ್ತಾಪಪಟ್ಟು ಯೇಸುಕ್ರಿಸ್ತನು ತನ್ನ ಪಾಪಗಳಿಗಾಗಿ ಕ್ರೂಜೆಯಲ್ಲಿ ಸತ್ತನು. ತನಗಾಗಿ ಹೂಣಲ್ಪಟ್ಟನು ಮತ್ತು ತನಗಾಗಿ ಮೂರನೆಯ ದಿನದಲ್ಲಿ ಮರಣದಿಂದ ಎದ್ದು ಬಂದನು ಎಂದು ಯಾರದರೂ ಹೃದಯದಲ್ಲಿ ನಂಬಿ ಬಾಯಲ್ಲಿ ಅರಿಕೆಮಾಡಿ ಕರ್ತನಾದ ಯೇಸುಕ್ರಿಸ್ತನನ್ನು ತಮ್ಮ ಜೀವಿತದ ಸ್ವಂತ ರಕ್ಷಕನಾಗಿ ಅಂಗೀಕರಸಿಕೊಳ್ಳುವರೋ ಅವರಿಗೆ ಆತನ ರಕ್ಷಣೆ ಕೊಟ್ಟು ರಕ್ಷಣೆಯ ವಸ್ತ್ರದಿಂದ ಅಲಂಕರಿಸಿ ಧರ್ಮವೆಂಬ (ನೀತಿ) ಎಂಬ ನಿಲುವಂಗಿಯನ್ನು ತೊಡಿಸುವನು. ಯಾರೆಲ್ಲಾ ರಕ್ಷಣೆಯ ವಸ್ತ್ರವನ್ನು ತೊಟ್ಟುಕೊಳ್ಳುತ್ತಾರೋ ಅವರು ಪಾಪದ ಶಿಕ್ಷೆಯಾದ ನರಕಕ್ಕೆ ಭಯಪಡುವ ಅವಶ್ಯಕತೆ ಇಲ್ಲ. ಈ ಲೋಕದಲ್ಲಿ ಕೂಡ ಕರ್ತನ ಆಶ್ರಯದಲ್ಲಿ ಸುರಕ್ಷಿತರಾಗಿರುವರು. **"ಪರಾತ್ಪರ ಮೊರೆಹೊಕ್ಕಿರುವವನು ಸರ್ವಶಕ್ತನ ಆಶ್ರಯದಲ್ಲಿ ಸುರಕ್ಷಿತನಾಗಿರುವನು"** (ಕೀರ್ತ. 91:1).

ಮುಂದುವರಿಯುವದು.........

**ಪಾ॥ ಸುನಿಲ್ ಜಾನ್ ಡಿ'ಸೋಜಾ.**

---

**ಧನ್ಯ ಜೀವಿತಕ್ಕೆ ಇವರು ಬಾಧ್ಯರು :**

1. ಆತ್ಮದಲ್ಲಿ ಬಡವರಾಗಿರುವವರು (ಮತ್ತಾ. 5:3).
2. ದು:ಖಪಡುವವರು (ಮತ್ತಾ. 5:4).
3. ನೀತಿಗೋಸ್ಕರ ಬಾಯಾರಿದವರು (ಮತ್ತಾ. 5:6).
4. ಕರುಣೆ ತೋರಿಸುವವರು (ಮತ್ತಾ. 5:7).
5. ಹೃದಯದಲ್ಲಿ ಶುದ್ಧತೆಯುಳ್ಳವರು (ಮತ್ತಾ. 5:8).
6. ಸಮಾಧಾನಪಡಿಸುವವರು (ಮತ್ತಾ. 5:9).
7. ನೀತಿಗಾಗಿ ಹಿಂಸೆಗೊಳಗಾದವರು (ಮತ್ತಾ. 5:10).
8. ಕ್ರಿಸ್ತನಿಗಾಗಿ ಹಿಂಸೆಪಡುವವರು (ಮತ್ತಾ. 5:11).
9. ವಸ್ತ್ರಗಳನ್ನು ಕಾಪಾಡಿಕೊಳ್ಳುವವರು (ಪ್ರಕ. 16:15).
10. ಔತಣಕ್ಕೆ ಕರೆಯಲ್ಪಟ್ಟವರು (ಪ್ರಕ. 19:9).
11. ನಿಲುವಂಗಿಯನ್ನು ತೊಳಕೊಂಡವರು (ಪ್ರಕ. 22:14).
12. ಕರ್ತನಲ್ಲಿ ಮರಣ ಹೊಂದುವವರು (ಪ್ರಕ. 14:13).

– ಸಂಗ್ರಹ.

ನಾನಂತು ನನ್ನ ವಿಮೋಚಕನು ಜೀವಸ್ವರೂಪನೆಂದು ಬಲ್ಲೆನು; ಆತನು ಕಡೆಗೆ ದೂಳಿನ ಮೇಲೆ (ಸಾಕ್ಷಿಯಾಗಿ) ನಿಂತುಕೊಳ್ಳುವೆನು (ಯೋಬ. 19:25).

# ಸ್ಥಳೀಯ ಮತ್ತು ವಿದೇಶ ಸುದ್ಧಿ

* **ಆರ್‌ಬಿಐ ರಾಜನ್‌ಗೆ ರೂ, ಷೇರುಪೇಟೆ ಭರ್ಜರಿ ಸ್ವಾಗತ :** ಭಾರತೀಯ ರಿಸರ್ವ್ ಬ್ಯಾಂಕ್ ಅಧ್ಯಕ್ಷರಾಗಿ ರಘುರಾಂ ರಾಜನ್ ಅಧಿಕಾರ ವಹಿಸಿಕೊಂಡ ಮಾರನೇ ದಿನವೇ ಅವರಿಗೆ ಷೇರುಪೇಟೆ ಮತ್ತು ರೂಪಾಯಿ ಮಾರುಕಟ್ಟೆಗೆ 'ಭರ್ಜರಿ ಸ್ವಾಗತ' ನೀಡಿವೆ.
* 1 ಅಪಘಾತಕ್ಕೆ 100 ವಾಹನ ನಜ್ಜುಗುಜ್ಜು ! ಲಂಡನ್, ದಟ್ಟ ಮಂಜು ಆವರಿಸಿದ್ದ ಬ್ರಿಟನ್ ಕೆಂಟ್‌ನ ಹೆದ್ದಾರಿಯಲ್ಲಿ ಸರಣಿ ಅಪಘಾತ ಸಂಭವಿಸಿದ್ದು, ಕೇವಲ 10 ನಿಮಿಷಗಳ ಅವಧಿಯಲ್ಲಿ ಬರೋಬ್ಬರಿ 100 ವಾಹನಗಳು ಪರಸ್ಪರ ಢಿಕ್ಕಿಯಾಗಿವೆ. ಈ ಎಲ್ಲ ವಾಹನಗಳು ನಜ್ಜುಗುಜ್ಜಾಗಿವೆ.
* ರಾಜ್ಯದ ಜನರೇ ಹೊಸವರ್ಷ ಅಂದರೆ 2014ರ ಜ. 1ರೊಳಗೆ ನಿಮ್ಮ ಆಧಾರ್ ಸಂಖ್ಯೆ ಪಡೆದುಕೊಳ್ಳಿ. ಇಲ್ಲದಿದ್ದರೆ ನಿಮಗೆ ಗ್ಯಾಸ್ ಸಬ್ಸಿಡಿ ಸಿಗದು. ನೀವು ಈಗಿನ ದರಕ್ಕಿಂತ ಡಬಲ್ ದರವನ್ನು ಗ್ಯಾಸ್ ಸಿಲಿಂಡರ್‌ಗೆ ನೀಡಬೇಕಾಗುತ್ತದೆ.
* ಇಂಗಾಲದ ಡೈಆಕ್ಸೈಡ್ ಪ್ರಮಾಣ ಹೆಚ್ಚಳದಿಂದ ವಿಶ್ವದ ಮರುಭೂಮಿಗಳಲ್ಲಿ ಹಸಿರು ಚಿಗುರುತ್ತಿದೆ ಎಂದು ಹೊಸ ಅಧ್ಯಯನ ಹೇಳಿದೆ. ಇಂಗಾಲ ಹೊರಸೂಸುವಿಕೆ ಪ್ರಮಾಣ ಏರಿಕೆಯಿಂದ ಭೂಮಿಗೆ ಅಪಾಯವು ಉಂಟಾಗುತ್ತಿದೆ ಎಂದು ಆತಂಕ ವ್ಯಕ್ತವಾಗಿರುವ ಸಂದರ್ಭದಲೇ ವಿಜ್ಞಾನಿಗಳು ಈ ಹೊಸವಾದವನ್ನು ಮುಂದಿಟ್ಟಿದ್ದಾರೆ.
* ಸುನಾಮಿಯಿಂದ ಹಾನಿಗೀಡಾದ ಫುಕುಶಿಮಾ ಪರಮಾಣು ಸ್ಥಾವರದಿಂದ ಫೆಸಿಫಿಕ್ ಸಾಗರಕ್ಕೆ ಹೆಚ್ಚಿನ ಪ್ರಮಾಣದಲ್ಲಿ ವಿಕಿರಣಶೀಲ ವಸ್ತು ಸೋರಿಕೆಯಾಗುತ್ತಿದೆ ಎಂದು ಜಪಾನ್ ಪರಮಾಣು ಕಾವಲು ಸಮಿತಿ ಶಂಕಿಸಿದೆ.
* ಭಯೋತ್ಪಾದಕ್ಕೆ ಚಟುವಟಿಕೆಗಳನ್ನು ಹತ್ತಿಕ್ಕಲು ಸೂಕ್ತಕ್ರಮ ತೆಗೆದುಕೊಳ್ಳಲಾಗುವದು ಎಂದು ಪಾಕಿಸ್ತಾನದಲ್ಲಿ ಭಾರತದ ನೂತನ ರಾಯಭಾರಿ ಟಿ.ಸಿ.ಎ. ರಾಘವನ್ ತಿಳಿಸಿದ್ದಾರೆ. ರಾಘವನ್ ಪಾಕ್‌ನಲ್ಲಿ ಡೆಪ್ಯುಟಿ ಹೈ ಕಮಿಷನರ್ ಆಗಿ ಸಹ ಸೇವೆ ಸಲ್ಲಿಸಿದ್ದಾರೆ.
* ಎಂಟು ವರ್ಷಗಳ ನಿರ್ಬಂಧವನ್ನು ತೆರೆವು ಮಾಡಿರುವ ಭಾರತ ಎಲ್ಲಾ ಬಗೆಯ ಶಸ್ತಾಸ್ತ್ರಗಳನ್ನು ನೇಪಾಳ ಸೇನೆಗೆ ಸರಬರಾಜು ಮಾಡಲು ನಿರ್ಧರಿಸಿದೆ. ಸುಮಾರು ರೂ 100 ಕೋಟಿ ಮೊತ್ತದ ಹಲವು ಬಗೆಯ ಶಸ್ತಾಸ್ತ್ರಗಳನ್ನು ಸರಬರಾಜು ಮಾಡುವದಾಗಿ ತಿಳಿದುಬಂದಿದೆ.
* ಭ್ರಷ್ಟಾಚಾರ ಪಿಡುಗಿನ ನಿಯಂತ್ರಣದಲ್ಲಿ ವಿಫಲವಾಗಿರುವ ಭಾರತ ಬಿಗಿ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ. ಜಾತಿಗಕ ಸರಾಸರಿ ಪ್ರಮಾಣಕ್ಕೆ ಹೋಲಿಸಿದರೆ ಕಳೆದ ಎರಡು ವರ್ಷಗಳ ಅವಧಿಯಲ್ಲಿ ದೇಶದಲ್ಲಿ ಭ್ರಷ್ಟಾಚಾರ ಮಿತಿಮೀರಿ ಬೆಳೆದಿದೆ ಎನ್ನುವ ಅಂಶ ಜಾಗತಿಕ ಮಟ್ಟದಲ್ಲಿ ನಡೆಸಲಾದ ಸಮೀಕ್ಷೆಯಲ್ಲಿ ವ್ಯಕ್ತವಾಗಿದೆ.

## ವಿಶೇಷ ಪ್ರಾರ್ಥನೆ :

ಪ್ರತಿ ತಿಂಗಳ ಮೊದಲನೇ ಶನಿವಾರ ಮಧ್ಯಾಹ್ನ 4–00ರಿಂದ 6–00 ಗಂಟೆಯವರೆಗೆ ಸ್ವಸ್ಥತೆಯ ಹಾಗೂ ಬಿಡುಗಡೆಯ ಆರಾಧನೆಯನ್ನು ಸಭಾಪಾಲಕರಾದ **ಸುನಿಲ್ ಜಾನ್ ಡಿ'ಸೋಜಾ** ಹಾಗೂ ತಂಡದವರ ನೇತೃತ್ವದಲ್ಲಿ ಡಿಜಿಎಮ್ ಬೇತೇಲ್ ಚರ್ಚ್ ಯೇಸುಪುರ, ಶಂಕರಪುರದಲ್ಲಿ ನಡೆಯುತ್ತಿದೆ. ಆಸಕ್ತಿಯುಳ್ಳ ಪ್ರತಿಯೊಬ್ಬರಿಗೂ ಆದರದ ಸ್ವಾಗತ. ರೋಗಿಗಳಿಗಾಗಿ ವಿಶೇಷವಾಗಿ ಪ್ರಾರ್ಥಿಸಲಾಗುವುದು. ಬನ್ನಿರಿ ಯೇಸುಕ್ರಿಸ್ತನು ಮಾಡುವ ಅದ್ಭುತಗಳನ್ನು ಹೊಂದಿಕೊಳ್ಳಿರಿ.

**"ದೈವಹಿಡಿದ ಬಹಳ ಜನರನ್ನು ಆತನ ಬಳಿಗೆ ಕರತಂದರು; ಆತನು ಮಾತು ಮಾತ್ರದಿಂದಲೇ ದೆವ್ವಗಳನ್ನು ಬಿಡಿಸಿದ್ದಲ್ಲದೆ ಮೈಯಲ್ಲಿ ನೆಟ್ಟಗಿಲ್ಲದವರೆಲ್ಲರನ್ನು ವಾಸಿಮಾಡಿದನು"** (ಮತ್ತಾ. 8:16).

***ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :***

**9902334941, 9964070654**

ಯೆಹೋವನು ಒಳ್ಳೆಯವನು; ಇಕ್ಕಟ್ಟಿನ ದಿನದಲ್ಲಿ ಆಶ್ರಯ ದುರ್ಗವಾಗಿದ್ದಾನೆ; ತನ್ನ ಮರೆಹೊಕ್ಕವರನ್ನು ಬಲ್ಲನು (ನಹೂ. 1:7).

# ಪ್ರಾರ್ಥನಾ ಸ್ವರ

ನಿಮ್ಮ ಸಮಸ್ಯೆಗಳಿಗಾಗಿಯೂ, ನಿಮ್ಮ ತೊಂದರೆ ಗಳಿಗಾಗಿಯೂ, ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಿ ಅಥವಾ ಕರೆ ಮಾಡಿ.

ನಮ್ಮ ಪ್ರಾರ್ಥನಾ ವೀರರು ನಿಮಗಾಗಿ ಕಣ್ಣೀರು ಸುರಿಸಿ ಪ್ರಾರ್ಥಿಸುವರು. ದೇವರು ಪ್ರಾರ್ಥನೆಯನ್ನು ಕೇಳಿ ಸದುತ್ತರವನ್ನು ಅನುಗ್ರಹಿಸಿ, ನಿಮ್ಮನ್ನು ನಿಮ್ಮ ಸಮಸ್ಯೆಯಿಂದ ಬಿಡಿಸುವನು.

ನಿಮ್ಮ ಪ್ರಾರ್ಥನಾ ಮನವಿಗಳನ್ನು, ನಿಮ್ಮ ವೈಯಕ್ತಿಕ ಸಮಸ್ಯೆಗಳನ್ನು ನಾವು ಗೋಪ್ಯವಾಗಿ ಇಡುತ್ತೇವೆ. ನಿಮ್ಮ ಪ್ರಶ್ನೆಗಳಿಗೆ ನಮ್ಮ ವಿಶೇಷ ಆಲೋಚಕರು ಉತ್ತರಿಸುತ್ತಾರೆ ಹಾಗೂ ಅದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. (ಬರಹಗಾರರ ಅನುಮತಿಯ ಮೇರೆಗೆ)

**24 ಗಂಟೆಗಳ ಪ್ರಾರ್ಥನೆಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 7760139148**

## ಓದುಗರಿಗೆ ವಿಶೇಷ ಸೂಚನೆ :

1. ಪ್ರೀತಿಯ ಓದುಗರೆಲ್ಲರಿಗೂ ತಿಳಿಯ ಪಡಿಸುವುದೇನೆಂದರೆ ತಾವುಗಳು ಡಿ.ಡಿ./ಚೆಕ್ಕುಗಳು ಯಾವುದನ್ನು ನಮ್ಮ ಸೇವೆಗೆ ಕಳುಹಿಸಲು ಬಯಸುವುದಾಗಿದ್ದಲ್ಲಿ ದಯಮಾಡಿ ರಿಜಿಸ್ಟರ್ ಪೋಸ್ಟ್ ಮೂಲಕ ಕಳುಹಿಸಲು ವಿನಂತಿಸುತ್ತೇವೆ. ಇದಕ್ಕಿಂತ ಮುಂಚೆ ಕೆಲವು ಪತ್ರಗಳು ನಮಗೆ ಸಿಗದೆ ಇರುವ ಕಾರಣ ತಮಗೆಲ್ಲರಿಗೂ ಈ ಸಲಹೆಯನ್ನು ಕೊಡಲು ಬಯಸುತ್ತೇವೆ.
2. ತಮಗೆ ಪ್ರತಿ ತಿಂಗಳು ನಮ್ಮ ದೇವರ ಸ್ವರ ಮಾಸಿಕ ಪತ್ರಿಕೆ ತಲುಪುತ್ತಾ ಇರಬಹುದು. ಆದರೆ ಅದಕ್ಕೆ ವಾರ್ಷಿಕ ದೇಣಿಗೆ ರೂ. 120/-ನ್ನು ಕೊಟ್ಟು ಚಂದಾದಾರರಾಗಿರದಿದ್ದಲ್ಲಿ ದಯಮಾಡಿ ತಮ್ಮ ಪರವಾದ ವಾರ್ಷಿಕ ರೂ. 120/- ಮನಿಯಾರ್ಡರ್ /ಡಿಡಿ ಮೂಲಕ ಕಳುಹಿಸಿ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ ಹಾಗೂ ನಿಮ್ಮ ವಿಳಾಸವನ್ನು ಮನಿಯಾರ್ಡರ್ ಸಂದೇಶ ಭಾಗದಲ್ಲಿ ಪಿನ್‌ಕೋಡ್ ಸಮೇತ ದಯವಿಟ್ಟು ನಮಗೆ ಬರೆದು ಕಳುಹಿಸಿ.
3. ತಮಗೆ ಪ್ರತಿ ತಿಂಗಳು ಸಮಯಕ್ಕೆ ಸರಿಯಾಗಿ ನಮ್ಮ ದೇವರ ಸ್ವರ ಮಾಸಿಕ ಪತ್ರಿಕೆ ಸಿಗದಿದ್ದಲ್ಲಿ ದಯಮಾಡಿ ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.
4. ಈ ಪತ್ರಿಕೆಯ ಯಾವುದೇ ಸಲಹೆ ಮತ್ತು ಸೂಚನೆಗಳನ್ನು ಕೊಡಬಯಸುವವರು ನಮ್ಮ ವಿಳಾಸಕ್ಕೆ ಬರೆದು ಕಳುಹಿಸಿ.
5. ನಿಮ್ಮ ವಿಳಾಸವು ಬದಲಾವಣೆ ಹೊಂದಿರುವುದಾದರೆ ನಿಮ್ಮ ಈಗಿನ ವಿಳಾಸವನ್ನು ಕಳುಹಿಸಿ ಕೊಡಿರಿ.
6. ನಿಮ್ಮ ವಿಳಾಸಕ್ಕೆ ಎರಡು ಪುಸ್ತಕಗಳು ಬರುತ್ತಿದ್ದರೆ ಅದನ್ನು ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.

ನಮ್ಮ ವಿಳಾಸ :
ಸಂಪಾದಕರು, ದೇವರ ಸ್ವರ, ಬೇತೇಲ್ ಚರ್ಚ್,
ಯೇಸುಪುರ, ಶಂಕರಪುರ ಪೋಸ್ಟ್, ಉಡುಪಿ - 574 115 ಕರ್ನಾಟಕ, ಭಾರತ.
e: Editor_voiceofgod@hotmail.com
Website : www.divinegen.org www.dgmbethelchurch.org

ನಮ್ಮ ಕಛೇರಿ ವಿಳಾಸ :
ಡಿಜಿಎಂ ಬೇತೇಲ್ ಕಛೇರಿ,
ಬೇತೇಲ್ ಚರ್ಚ್, ಯೇಸುಪುರ, ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.
Ph: (0820) 2589070, 200 2781
E-mial: dgmofficial@gmail.com

## ಮಹಿಳೆಯರ ಸ್ವರ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ಇಸ್ರಾಯೇಲ್ಯರು ಮಾಡಿದ ದೇವ ದ್ರೋಹ ಯಾವುದು ? ಹಾಗೂ ಇಂದಿನ ದಿನಗಳಲ್ಲಿರುವ ಹೊಸ ಒಡಂಬಡಿಕೆಯ ಸಭೆಗಳಿಗೂ ಇದು ಅನ್ವಯವಾಗುತ್ತದೆ.

1. ದೇವರು ಸೃಷ್ಟಿಸಿದ ಸೃಷ್ಟಿಯನ್ನು ಆರಾಧಿಸಿದರು.
2. ಮನುಷ್ಯನು ಕೈಯಿಂದ ಮಾಡಿದ ವಿಗ್ರಹಗಳನ್ನು ಆರಾಧಿಸಿದರು.
3. ಅನ್ಯಜನರ ಸಂಪ್ರದಾಯ ಹಾಗೂ ಅಭ್ಯಾಸಗಳನ್ನು ಅನುಸರಿಸಿದರು.
4. ಅನ್ಯರನ್ನು ಮದುವೆಯಾದರು.
5. ತಮ್ಮನ್ನು ಎಲ್ಲಾ ಇಕ್ಕಟ್ಟುಗಳಿಂದ ಬಿಡಿಸಿದ ದೇವರನ್ನು ಮರೆತರು.
6. ದೇವರು ಅವರ ಮೇಲೆ ನೇಮಿಸಿದ ನಾಯಕತ್ವಕ್ಕೆ ವಿರುದ್ಧವಾಗಿ ನಿಂತರು.
7. ದೇವರ ಮಾತಿಗೆ ಅವಿಧೇಯತೆ ತೋರಿಸಿದರು.

1) **ದೇವರು ಸೃಷ್ಟಿಸಿದ ಸೃಷ್ಟಿಯನ್ನು ಆರಾಧಿಸಿದರು:** ದೇವರನ್ನು ಸೃಷ್ಟಿಕರ್ತ ಎಂದು ಪ್ರಕಟಿಸುತ್ತದೆ. ಸೃಷ್ಟಿಕರ್ತ ಅಂದರೆ ಈ ಲೋಕದ ಸೃಷ್ಟಿಯನ್ನು ಸೃಷ್ಟಿಸಿದವನು ಎಂದು ಅರ್ಥ.

ದೇವರಿಗೆ ದೇವರು ಎಂದು ಕರೆಯಬೇಕಾದರೆ ದೈವತ್ವದ ಗುಣ ಸ್ವಾಭಾವಗಳು ಇರಬೇಕು.

1) **ಕರ್ತನು ಸರ್ವಶಕ್ತನಾಗಿರಬೇಕು** (ಯೆರೆ. 32:27, ಆದಿ. 17:1) ನಾನು ಸರ್ವಶಕ್ತನಾದ ದೇವರು ಎಂದು ಹೇಳುತ್ತಿದ್ದಾನೆ.

2) **ಆತನು ಸರ್ವವ್ಯಾಪಿಯಾಗಿರಬೇಕು** (ಯೆರೆ. 23:24). ನನ್ನ ಕಣ್ಣಿಗೆ ಬೀಳದಂತೆ ಯಾವನಾದರೂ ಗುಪ್ತಸ್ಥಳಗಳಲ್ಲಿ ತನ್ನನ್ನು ಮರೆಮಾಡಿ ಕೊಂಡಾನೇ? ನಾನು ಭೂಮ್ಯಾಕಾಶ ಗಳಲ್ಲಿಯೂ ವ್ಯಾಪಿಸಿರುವವನಲ್ಲವೇ.

3) **ಆತನು ಸರ್ವಜ್ಞಾನಿಯಾಗಿರಬೇಕು** (ರೋಮ. 11:33). ಆಹಾ ದೇವರ ಐಶ್ವರ್ಯವೂ ಜ್ಞಾನವೂ ವಿವೇಕವೂ ಎಷ್ಟೋ ಅಗಾಧ ಆತನ ತೀರ್ಮಾನಗಳು ಪರಿಶೋಧನೆಗೆ ಎಷ್ಟೋ ಅಗಮ್ಯ ಆತನ ಮಾರ್ಗಗಳು ಕಂಡು ಹಿಡಿಯವುದಕ್ಕೆ ಎಷ್ಟೋ ಅಸಾಧ್ಯ.

4) **ಆತನು ನಿತ್ಯನಾದವನಾಗಿರಬೇಕು** (ಯೆಶಾ. 57:15). ಸದಮಲನೆನಿಸಿಕೊಂಡು ಶಾಶ್ವತ ಲೋಕದಲ್ಲಿ ನಿತ್ಯನಿವಾಸಿಯಾದ ಮಹೋನ್ನತನು ಹೀಗನ್ನುತ್ತಾನೆ. ಉನ್ನತಲೋಕವೆಂಬ ಪವಿತ್ರಾಲಯದಲ್ಲಿ ವಾಸಿಸುವ ನಾನು ಜಜ್ಜಿಹೋದ ದೀನಮನದೊಂದಿಗೆ ಇದ್ದುಕೊಂಡು ದೀನನ ಆತ್ಮವನ್ನು ಜಜ್ಜಿ ಹೋದವನ ಮನಸ್ಸನ್ನು ಉಜ್ಜೀವಿಸುವವನಾಗಿದ್ದೇನೆ.

5) **ಆತನು ಆತ್ಮಸ್ವರೂಪನಾಗಿರಬೇಕು** (ಯೋಹಾ. 4:24) ದೇವರು ಆತ್ಮಸ್ವರೂಪನು ಆತನನ್ನು ಆರಾಧಿಸುವವರು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ಆರಾಧಿಸಬೇಕು.

6) **ಆತನು ಎಲ್ಲವನ್ನು ನೋಡುವಾತನು** (ಕೀರ್ತ. 139:7). ನಾನು ನಿನ್ನ ಆತ್ಮಕ್ಕೆ ತಪ್ಪಿಸಿಕೊಳ್ಳುವಂತೆ ಎಲ್ಲಿಗೆ ಹೋಗಲಿ ನಿನ್ನ ಕಣ್ಣಿಗೆ ಮರೆಯಾಗುವಂತೆ ಎಲ್ಲಿಗೆ ಓಡಲಿ. ಇಬ್ರಿ. 4:13 ನಾವು ಯಾವಾತನಿಗೆ ಲೆಕ್ಕ ಒಪ್ಪಿಸಬೇಕಾಗಿದೆಯೋ ಆತನ ದೃಷ್ಟಿಗೆ ಸಮಸ್ತವೂ ಮುಚ್ಚುಮರೆ ಇಲ್ಲದ್ದಾಗಿಯೂ ಬೈಲಾದದ್ದಾಗಿಯೂ ಅದೆ.

7) **ಆತನು ಎಲ್ಲವನ್ನು ತಿಳಿದುಕೊಳ್ಳುವಾತನು** (ಕೀರ್ತ. 139:1–5, ಯೋಹಾ. 2:25). ಆತನು ಪ್ರತಿ ಮನುಷ್ಯನ ಅಂತರ್ಯವನ್ನು ತಿಳಿದವನಾದ ಕಾರಣ ಯಾವನೂ ಯಾವ ಮನುಷ್ಯನ ವಿಷಯದಲ್ಲಿಯೂ ಆತನಿಗೆ ಸಾಕ್ಷಿಕೊಡಬೇಕಾದ ಅವಶ್ಯವಿರಲಿಲ್ಲ.

8) **ಆತನು ಎಲ್ಲವನ್ನು ಕೇಳುವವನಾಗಿರಬೇಕು** (ಕೀರ್ತ. 139:4–5) ಯೆಹೋವನೇ ನನ್ನ ನಾಲಿಗೆಯ ಮಾತುಗಳಲ್ಲಿ ನೀನು ಅರಿಯದೆ ಇರುವಂತದ್ದು ಒಂದೂ ಇಲ್ಲ. ಸುತ್ತಲೂ ನನ್ನನ್ನು ಆವರಿಸಿ ನಿನ್ನ ಕೈಯನ್ನು ನನ್ನ ಮೇಲೆ ಇಟ್ಟದ್ದಿ. ಕೀರ್ತ. 65:2 ಪ್ರಾರ್ಥನೆಯನ್ನು ಕೇಳುವವನೇ (ಲೋಕದ ಪ್ರತಿಯೊಂದು ಸ್ಥಳಗಳಿಂದ ಪ್ರತಿ ವ್ಯಕ್ತಿಗಳಿಂದ) ನರರೆಲ್ಲರೂ ನಿನ್ನ ಬಳಿಗೆ ಬರುವರು.

9) **ಆತನು ಪವಿತ್ರಸ್ವರೂಪನಾಗಿರಬೇಕು** (1 ಪೇತ್ರ. 1:16). ನಾನು ಪರಿಶುದ್ಧನಾಗಿರುವುದರಿಂದ ನೀವೂ

ಆಹಾ, ನಿನ್ನ ಪೌಳಿಗೋಡೆಗಳನ್ನು ಕಟ್ಟುವ ದಿನವು ಬರುವದು; ಆ ದಿನದಲ್ಲಿ ನಿನ್ನ ಎಲ್ಲೆಯು ದೂರದ ತನಕ ವಿಸ್ತರಿಸಿಕೊಂಡಿರುವದು (ಮೀಕ. 7:11).

ಪರಿಶುದ್ಧರಾಗಿರಬೇಕು ಎಂದು ಬರೆದದೆಯಲ್ಲಾ.

10) **ಆತನು ಪ್ರೀತಿಸ್ವರೂಪನಾಗಿರಬೇಕು** (1 ಯೋಹಾ. 4:8). ಪ್ರೀತಿ ಇಲ್ಲದವನು ದೇವರನ್ನು ಬಲ್ಲವನಲ್ಲಾ ಯಾಕೆಂದರೆ ದೇವರು ಪ್ರೀತಿ ಸ್ವರೂಪಿಯು (ಯೆಶಾ. 49:15–16) **ಒಬ್ಬ ಹೆಂಗಸು ತಾನು ಹೆತ್ತ ಮಗುವಿನ ಮೇಲೆ ಕರುಣೆ ಇಡದೆ ತನ್ನ ಮೊಲೆಕೂಸನ್ನು ಮರೆತಾಳೆ? ಒಂದು ವೇಳೆ ಮರೆತಾಳು ನಾನದರೋ ನಿನ್ನನ್ನು ಮರೆಯೇ ಇಗೋ ನನ್ನ ಅಂಗೈಗಳಲ್ಲಿ ನಿನ್ನನ್ನು ಚಿತ್ರಿಸಿದ್ದೇನೆ ನಿನ್ನ ಪೌಳಿಗೋಡೆಗಳು ಸದಾ ನನ್ನ ಕಣ್ಣೆದುರಿನಲ್ಲಿವೆ.**

11) **ಆತನು ಸೃಷ್ಟಿಕರ್ತನಾಗಿರಬೇಕು** (ಪ್ರಸ. 12:1):– **ಆತನು ತನ್ನ ಶಕ್ತಿಯಿಂದ ಭೂಮಿಯನ್ನು ನಿರ್ಮಿಸಿ ತನ್ನ ಜ್ಞಾನದಿಂದ ಲೋಕವನ್ನು ಸ್ಥಾಪಿಸಿ ತನ್ನ ವಿವೇಕದಿಂದ ಆಕಾಶಮಂಡಲವನ್ನು ಹರಡಿದ್ದಾನೆ** (ಯೆರೆ. **10:12**). **ಯಾಕೋಬ್ಯರ ಸ್ವಾಸ್ಥ್ಯವಾದತನು ಅವುಗಳ ಹಾಗಲ್ಲ; ಆತನು ಸಮಸ್ತವನ್ನೂ ನಿರ್ಮಿಸಿದವನು; ಇಸ್ರಾಯೇಲು ಆತನ ಸ್ವಾಸ್ತ್ಯವಾದ ವಂಶ; ಸೇನಾಧೀಶ್ವರನಾದ ಯೆಹೋವನೆಂಬದು ಆತನ ನಾಮಧೇಯ** (ಯೆರೆ. 10:16).

**"ಆತನು ತನ್ನ ಶಕ್ತಿಯಿಂದ ಭೂಮಿಯನ್ನು ನಿರ್ಮಿಸಿ ತನ್ನ ಜ್ಞಾನದಿಂದ ಲೋಕವನ್ನು ಸ್ಥಾಪಿಸಿ ತನ್ನ ವಿವೇಕದಿಂದ ಆಕಾಶಮಂಡಲವನ್ನು ಹರಡಿದ್ದಾನೆ; ಆತನ ಗರ್ಜನೆಗೆ ಆಕಾಶದಲ್ಲಿ ನೀರು ಮೊರೋ ಎನ್ನುತ್ತದೆ; ಆತನು ಭೂಮಿಯ ಕಟ್ಟಕಡೆಯಿಂದ ಮೋಡಗಳನ್ನು ಏರಮಾಡುತ್ತಾನೆ; ಮಳೆಗೋಸ್ಕರ ಮಿಂಚನ್ನು ಹೊಳೆಯ ಮಾಡುತ್ತಾನೆ. ತನ್ನ ಭಂಡಾರದಿಂದ ಗಾಳಿಯನ್ನು ಬೀಸಮಾಡುತ್ತಾನೆ. ಎಲ್ಲರೂ ತಿಳುವಳಿಕೆಯಿಲ್ಲದೆ ಪಶುಪ್ರಾಯರಾಗಿದ್ದಾರೆ; ತಾನು ಕೆತ್ತಿದ ವಿಗ್ರಹದ ನಿಮಿತ್ತ ಪ್ರತಿಯೊಬ್ಬ ಅಕ್ಕಸಾಲಿಗನೂ ಅವಮಾನಕ್ಕೆ ಗುರಿಯಾಗುವನು; ಅವನು ಎರಕಹೊಯ್ದ ಪುತ್ತಳಿಯು ಸುಳ್ಳು, ಅವುಗಳಲ್ಲಿ ಶ್ವಾಸವೇ ಇಲ್ಲ. ಅವು ವ್ಯರ್ಥ, ಹಾಸ್ಯಸ್ಪದವಾದ ಕೆಲಸ; ದಂಡನೆಯಾಗುವಾಗ ಅಳಿದುಹೋಗುವವು. ಯಾಕೋಬ್ಯರ ಸ್ವಾಸ್ಥ್ಯವಾದತನು ಅವುಗಳ ಹಾಗಲ್ಲ; ಆತನು ಸಮಸ್ತವನ್ನೂ ನಿರ್ಮಿಸಿದವನು; ಇಸ್ರಾಯೇಲು ಆತನ ಸ್ವಾಸ್ತ್ಯವಾದ ವಂಶ; ಸೇನಾಧೀಶ್ವರನಾದ ಯೆಹೋವನೆಂಬದು ಆತನ ನಾಮಧೇಯ"** (ಯೆರೆ. 51:15–19).

12) **ಆತನು ಬದಲಾಗದವನಾಗಿರಬೇಕು** (ಇಬ್ರಿ. 13:8): ಯೇಸುಕ್ರಿಸ್ತನು ನಿನ್ನೆ ಇದ್ದ ಹಾಗೆ ಈ ಹೊತ್ತು ಇದ್ದಾನೆ. ನಿರಂತರವೂ ಹಾಗೆಯೇ ಇರುವನು. ಮಲಾ. 3:6 ಯೆಹೋವನಾದ ನಾನು ಮಾರ್ಪಟ್ಟಿಲ್ಲ. ಆದುದರಿಂದ ಯಾಕೋಬ ಸಂತತಿಯವರೇ ನೀವು ನಾಶವಾಗಲಿಲ್ಲ.

13) **ಆತನು ರಕ್ಷಿಸುವವನಾಗಿರಬೇಕು** (ಕೀರ್ತ. 91:1): ಪರಾತ್ಪರನ ಮೊರೆ ಹೊಕ್ಕಿರುವವನು ಸರ್ವಶಕ್ತನ ಆಶ್ರಯದಲ್ಲಿ ಸುರಕ್ಷಿತನಾಗಿರುವನು.

**ದೇವರಲ್ಲಿರುವ ಗುಣಸ್ವಭಾವಗಳು :**

1) ಕೀರ್ತ. 118:1 ಯೆಹೋವನಿಗೆ ಕೃತಜ್ಞಾತಾ ಸ್ತುತಿ ಮಾಡಿರಿ ಆತನು ಒಳ್ಳೆಯವನು ಆತನ ಕೃಪೆಯು ಶಾಶ್ವತ. ಕೀರ್ತ. 119:68 ನೀನು ಒಳ್ಳೆಯವನೂ ಒಳ್ಳೆಯದನ್ನು ಮಾಡುವವನಾಗಿದ್ದೀ. ನಿನ್ನ ನಿಬಂಧನೆಗಳನ್ನು ನನಗೆ ಬೋಧಿಸು (ದೇವರು ಒಳ್ಳೆಯವನು) ಯಾರೆಲ್ಲಾ ಸೃಷ್ಟಿಕರ್ತನಾದ ತಂದೆ ದೇವರನ್ನು ಆರಾಧಿಸುತ್ತಾರೋ ಅವರಲ್ಲಿ ಆತನ ಒಳ್ಳೇ ಗುಣಗಳು ಬರುತ್ತವೆ. ಅವರು ಲೋಕದ ಎಲ್ಲಾ ಜನರನ್ನು ಪ್ರೀತಿಸುತ್ತಾರೆ. ಜಾತಿ ಭೇದವಿಲ್ಲದೆ ಎಲ್ಲಾ ಜನರಿಗೆ ಸಹಾಯ ಮಾಡುತ್ತಾರೆ, ಇನ್ನೊಬ್ಬರನ್ನು ಹಿಂಸಿಸುವುದಿಲ್ಲ, ಇನ್ನೊಬ್ಬರನ್ನು ಕೊಲ್ಲುವುದಿಲ್ಲ, ಇನ್ನೊಬ್ಬರ ಆಸ್ತಿಪಾಸ್ತಿ ನಷ್ಟ ಮಾಡುವುದಿಲ್ಲ, ಇನ್ನೊಬ್ಬರನ್ನು ದ್ವೇಷದಿಂದ, ರೋಷದಿಂದ, ಹೊಟ್ಟೆಕಿಚ್ಚಿನಿಂದ ನೋಡುವುದಿಲ್ಲ. ಮತ್ತೊಬ್ಬರ ಮೇಲೆ ದ್ವೇಷ ಸಾಧಿಸುವುದಿಲ್ಲ. ಯಾಕಂದರೆ ಅವರು ಒಳ್ಳೆಯ ಗುಣಗಳಿರುವ ಸೃಷ್ಟಿಕರ್ತನನ್ನು ಆರಾಧಿಸುತ್ತಾರೆ ಅವರ ಗುಣಗಳು ತಾವು ಆರಾಧಿಸುವ ದೇವರ ಗುಣಗಳ ಹಾಗೆ ಬದಲಾಗುತ್ತವೆ.

**ನನ್ನ ಪ್ರಾಣವನ್ನು ಉಜ್ಜೀವಿಸಮಾಡಿ ತನ್ನ ಹೆಸರಿಗೆ ತಕ್ಕಂತೆ ನೀತಿಮಾರ್ಗದಲ್ಲಿ ನನ್ನನ್ನು ನಡೆಸುತ್ತಾನೆ** (ಕೀರ್ತ. 23:3). **"ಎಲ್ಲಾ ಒಳ್ಳೇ ದಾನಗಳೂ ಕುಂದಿಲ್ಲದ ಎಲ್ಲಾ ವರಗಳೂ ಮೇಲಣಿಂದ ಸಕಲವಿಧವಾದ ಬೆಳಕಿಗೂ ಮೂಲಕಾರಣನಾದವನಿಂದ ಇಳಿದುಬರುತ್ತವೆ. ಆತನಲ್ಲಿ ಚಂಚಲತ್ವವೇನೂ ಇಲ್ಲ, ವ್ಯತ್ಯಾಸದ ಸೂಚನೆಯೂ ಇಲ್ಲ"** (ಯಾಕೋ. 1:17).

ಮುಂದುವರಿಯುವುದು.....

ಕರ್ತನ ಸೇವೆಯಲ್ಲಿ ಪ್ರಯಾಸಪಡುತ್ತಿರುವ ಮತ್ತು
ನಿಮ್ಮೆಲ್ಲರ ಪ್ರೀತಿಗೆ ಪಾತ್ರಳಾದ ಕ್ರಿಸ್ತನ ದಾಸಿಯಾದ,

**– ಸಹೋ॥ ಎಲಿಜಬೆತ್ ಸುನಿಲ್ ಡಿ'ಸೋಜಾ.**

ನಿಮ್ಮ ದೇವರಾದ ಯೆಹೋವನು ನಿಮ್ಮ ಎಲ್ಲಾ ಕೆಲಸಗಳಲ್ಲಿಯೂ ಪ್ರಯತ್ನಗಳಲ್ಲಿಯೂ
ನಿಮ್ಮನ್ನು ಅಭಿವೃದ್ಧಿಪಡಿಸುವನು (ಧರ್ಮೋ. 15:10).

* ಕ್ಯಾಬೇಜ್‌ನ ಪಲ್ಯ, ಪದಾರ್ಥ, ಕೋಸಂಬರಿ ತಯಾರಿಸುವಾಗ ಅದರ ಹಸಿವಾಸನೆಯನ್ನು ನಿವಾರಿಸಲು ಕ್ಯಾಬೇಜ್ ಕತ್ತರಿಸಿ ಬೇಯಿಸುವಾಗ ಬ್ರೆಡ್‌ನ ಸಣ್ಣ ತುಣುಕುಗಳನ್ನು ಬೆರೆಸಿದರೆ ಕ್ಯಾಬೇಜ್‌ನ ಹಸಿವಾಸನೆ ನಿವಾರಣೆಯಾಗುತ್ತದೆ. ಜೊತೆಗೆ ಖಾದ್ಯದ ರುಚಿಯೂ ಹೆಚ್ಚುತ್ತದೆ.
* ಗೆಣಸನ್ನು ಇಡಿಯಾಗಿ ಕುಕ್ಕರ್‌ನಲ್ಲಿ ಬೇಯಿಸಿ ಬಳಿಕ ಅದನ್ನು ತಣ್ಣೀರಿನಲ್ಲಿ ಸ್ವಲ್ಪ ಹೊತ್ತು ನೆನಸಿದರೆ ಕೂಡಲೇ ಸಿಪ್ಪೆಯನ್ನು ಸುಲಭವಾಗಿ ತೆಗೆಯಬಹುದು.
* ಈರುಳ್ಳಿ ಕತ್ತರಿಸುವಾಗ ಕಣ್ಣು ಮತ್ತು ಮೂಗಿನಲ್ಲಿ ನೀರು ಸುರಿಯುವುದು ಸಾಮಾನ್ಯ. ಹಾಂ! ಚ್ಯೂಯಿಂಗ್ ಗಮ್ ಜಗಿಯುತ್ತಾ ಈರುಳ್ಳಿ ಕತ್ತರಿಸಿದರೆ ಈ ತೊಂದರೆ ಮಾಯ ! ಈರುಳ್ಳಿ ಅರ್ಧಕ್ಕೆ ಕತ್ತರಿಸಿ ತಣ್ಣೀರಿನಲ್ಲಿ 15 ನಿಮಿಷ ನೆನೆಸಿಟ್ಟು, ಬಳಿಕ ಕತ್ತರಿಸಿದರೆ ಕಣ್ಣು ಮೂಗಿನಲ್ಲಿ ನೀರು ಸುರಿಯುವುದಿಲ್ಲ.
* ಆಲೂಗಡ್ಡೆಯನ್ನು ಬೇಗನೆ ಬೇಯುವಂತೆ ಮಾಡಲು ಚೆನ್ನಾಗಿ ತೊಳೆದ ಒಂದು ಭಾಗದಲ್ಲಿ ಸಣ್ಣಗೆ ಸಿಪ್ಪೆತೆಗೆದು ಬಳಿಕ ಇಡಿಯಾಗಿ ಕುದಿಸಿ ನೀರಲ್ಲಿ ಕುಕ್ಕರ್‌ನಲ್ಲಿ ಬೇಯಿಸಿದರೆ ಬೇಗನೆ ಬೇಯುತ್ತದೆ. ಇಡೀ ಸಿಪ್ಪೆತೆಗೆದರೆ ಆಲೂಗಡ್ಡೆಯಲ್ಲಿರುವ ಪೊಟ್ಯಾಶಿಯಂ, ವಿಟಮಿನ್‌ಗಳು ಕಡಿಮೆಯಾಗುವುದರಿಂದ, ಇಡೀ ಸಿಪ್ಪೆತೆಗೆದು ಬೇಯಿಸಬಾರದು. ಸ್ವಲ್ಪ ಮಾತ್ರ ಸಿಪ್ಪೆತೆಗೆದು ಬೇಯಿಸುವುದರಿಂದ ಆಲೂಗಡ್ಡೆಯು ಬೇಗನೆ ಬೇಯುತ್ತದೆ. ಜೊತೆಗೆ ಸತ್ತ್ವವೂ ನಷ್ಟವಾಗುವುದಿಲ್ಲ.
* ಮಕ್ಕಳ ಬಟ್ಟೆಗೆ ಇಂಕ್ ಬಿದ್ದು ಕಲೆಯಾದರೆ ಆಗ, ಟೂಥ್‌ಪೇಸ್ಟನ್ನು ಕಲೆಯ ಭಾಗಕ್ಕೆ ಹಚ್ಚಿ ಚೆನ್ನಾಗಿ ತಿಕ್ಕಿ ಒಣಗಿಸಬೇಕು. ಬಳಿಕ ಸೋಪ್ ನೀರಿನಲ್ಲಿ ಅದ್ದಿ ತಿಕ್ಕಿ ತೊಳೆದರೆ ಬಟ್ಟೆಯ ಇಂಕ್‌ನ ಕಲೆ ನಿವಾರಣೆಯಾಗುತ್ತದೆ.
* ಕೂದಲನ್ನು ಬಿಡಿಯಾಗಿ ಇಳಿಬಿಟ್ಟರೆ ಬೆವರು ಹೆಚ್ಚಿಕೂದಲು ಜಿಡ್ಡಾಗುತ್ತದೆ. ಆದ್ದರಿಂದ ವಿವಿಧ ವಿನ್ಯಾಸಗಳಲ್ಲಿ ಕೂದಲು ಕಟ್ಟಿದರೆ ಆರೋಗ್ಯಕ್ಕೂ ಸೌಂದರ್ಯಕ್ಕೂ ಹಿತಕರ.
* ಕೂದಲಿಗೆ ಒಂದೆಲಗ, ನೆಲ್ಲಿರಸ, ತುಳಸೀರಸ ಬೆರೆಸಿ ತಯಾರಿಸಿದ ತೈಲ ಹಿತಕರ.

**ಜೋಳಕಾಂಶಗಳಲ್ಲಿ ಪೋಷಣಾ ಅಂಶಗಳು**

* ಇದು ಅವಶ್ಯಕ ಪೋಷಕಾಂಶಗಳಾದ ಕಬ್ಬಿಣ, ಕ್ಯಾಲ್ಸಿಯಂ, ಪೊಟ್ಯಾಷಿಯಂ ಮತ್ತು ಪಾಸ್ಪರಸ್‌ಗಳಿಂದ ಸಮೃದ್ಧವಾಗಿವೆ.
* ಜೋಳದಲ್ಲಿ ವಿಟಾಮಿನ್ ಬಿಗಳಾದ ಥಿಯಾಮೈನ್ ಮತ್ತು ರೈಬೋಫ್ಲೇನ್‌ಗಳು ಇವೆ.
* ಸಾರ್ಗಮ್ ಅಥವಾ ಹುಲ್ಲುಜೋಳದಲ್ಲಿ ಫೈಟೋ ಕೆಮಿಕಲ್ಸ್, ಟ್ಯಾನಿನ್ಸ್, ಫಿನಾಲಿಕ್ ಆಸಿಡ್ ಮತ್ತು ಆಂಥೋಸಿಯಾನಿನ್‌ಗಳು ಸಮೃದ್ಧವಾಗಿರುತ್ತವೆ. ಇದರಲ್ಲಿರುವ ಫೈಟೋಕೆಮಿಕಲ್ಸ್ ಬೊಜ್ಜಿನ ನಿಯಂತ್ರಣದಲ್ಲಿ ಮಹತ್ವಪೂರ್ಣವೆನಿಸಿದೆ.
* ಜೋಳವು ಹೃದಯಸ್ನೇಹಿ ಆಹಾರವಾಗಿದೆ.
* ಭಾರತದಲ್ಲಿ ಸಾಮಾನ್ಯವಾಗಿ ಜೋಳದ ರೋಟಿಗಳನ್ನು ಸೇವಿಸುತ್ತಾರೆ. ಜೋಳದ ಹಿಟ್ಟನ್ನು ಇತರ ಹಿಟ್ಟುಗಳ ಜೊತೆಗೆ ಮಿಶ್ರಣಮಾಡಿ, ಮಿಶ್ರಧಾನ್ಯಗಳ ಹಿಟ್ಟನ್ನು ತಯಾರಿಸಬಹುದು. ಜೋಳದ ಹಿಟ್ಟಿನಿಂದ ದೋಸೆ, ಚಪಾತಿ ಮತ್ತು ಗಂಜಿಗಳನ್ನೂ ಸಹ ತಯಾರಿಸಬಹುದು.

## ಆರೋಗ್ಯ ಸ್ವರ

**ಗೋಧಿಯ ಬ್ರೆಡ್ಡಿನ ಪೋಷಣಾ ಅಂಶಗಳು**

* ಗೋಧಿಯ ಬ್ರೆಡ್‌ನ್ನು ಕಡಿಮೆ ಸಂಸ್ಕರಿತ ಹಿಟ್ಟಿನಿಂದ ತಯಾರಿಸಲಾಗುತ್ತದೆ.
* ಪ್ರತಿ ಸ್ಲೈಸ್‌ನಲ್ಲಿಯೂ ಇದು ಕಡಿಮೆ ಸಕ್ಕರೆ ಮತ್ತು ಹೆಚ್ಚುನಾರಿನ ಅಂಶವನ್ನು ಹೊಂದಿರುತ್ತದೆ.
* ಬಿಳಿಯ ಬ್ರೆಡ್ಡಿಗಿಂತಲೂ ಗೋಧಿಯ ಬ್ರೆಡ್ಡಿನಲ್ಲಿ ಹೆಚ್ಚು ಪ್ರೊಟೀನ್ ಮತ್ತು ವಿಟಾಮಿನ್ ಬಿಗಳು ಇವೆ.
* 2 ಸ್ಲೈಸ್ ಗೋಧಿ ಬ್ರೆಡ್ಡಿನಲ್ಲಿ 132 ಕ್ಯಾಲೊರಿಗಳಿದ್ದು, ಇದರ ಅರ್ಧಕ್ಕಿಂತಲೂ ಹೆಚ್ಚು ಭಾಗ ಕಾರ್ಬೋಹೈಡ್ರೇಟ್‌ನಿಂದ ಬರುತ್ತದೆ.
* ಎರಡು ಸ್ಲೈಸ್ ಗೋಧಿಯ ಬ್ರೆಡ್ಡಿನಲ್ಲಿ 1.8 ಗ್ರಾಂ ನಷ್ಟು ನಾರಿನಂಶವಿದೆ, ದೇಹದ ತೂಕವನ್ನು ಇಳಿಸಬೇಕೆನ್ನುವವರಿಗೆ ನಾರಿನಂಶವಿರುವ ಆಹಾರವು ಒಳ್ಳೆಯದು. ಯಾಕೆಂದರೆ, ಇದು ಹೊಟ್ಟೆತುಂಬಿರುವಂತಹ ಅನಿಸಿಕೆಯನ್ನು ಮೂಡಿಸುತ್ತದೆ.
* ಜೀರ್ಣ ಪ್ರಕ್ರಿಯೆಯಲ್ಲಿಯೂ ಸಹ ನಾರಿನಂಶವು ಮಹತ್ವಪೂರ್ಣ ಪಾತ್ರವನ್ನು ವಹಿಸುತ್ತದೆ. ಬಿಳಿಯ ಬ್ರೆಡ್‌ಗಿಂತಲೂ, ಗೋಧಿಯ ಬ್ರೆಡ್ಡಿನಲ್ಲಿ ನಾರಿನಂಶವು ಅಧಿಕವಿರುತ್ತದೆ. ಅಧಿಕ ನಾರಿನಂಶವಿರುವ ಬಹುಧಾನ್ಯಗಳ ಬ್ರೆಡ್‌ಗಳೂ ಸಹ ಲಭ್ಯ ಇವೆ.

ನಿಮಗೆ ಊರಲ್ಲಿಯೂ ಅಡವಿಯಲ್ಲಿಯೂ ಶುಭವುಂಟಾಗುವದು. ನಿಮ್ಮ ಸಂತಾನ ವ್ಯವಸಾಯಗಳಿಗೂ ದನಕುರಿ ಮುಂತಾದ ಪಶುಗಳಿಗೂ ಶುಭವುಂಟಾಗುವುದು (ಧರ್ಮೋ. 28:3-4).

* ಗೋಧಿ ಬ್ರೆಡ್ಡಿನ ಪ್ರತಿ ಸರ್ವಿಂಗ್ 5.46 ಪ್ರೊಟೀನ್‌ನ್ನು ಒದಗಿಸುತ್ತದೆ.
* ಜೀವಕೋಶಗಳ ಪುನರ್‌ರಚನೆ ಮತ್ತು ನಿರ್ಮಾಣಕ್ಕೆ ಪ್ರೊಟೀನ್ ಅವಶ್ಯಕ. ಗೋಧಿಯ ಬ್ರೆಡ್ಡಿನಲ್ಲಿ ಬಿಳಿ ಬ್ರೆಡ್‌ಗಿಂತ ಹೆಚ್ಚು ಪ್ರೊಟೀನ್ ಇರುವ ಕಾರಣ, ಸಸ್ಯಾಹಾರಿಗಳಿಗೆ ತಮ್ಮ ಆಹಾರದಿಂದ ಪ್ರೋಟೀನ್‌ನ ಕೊರತೆ ಬಾಧಿಸುವ ಕಾರಣಕ್ಕಾಗಿ, ಅವರಿಗೆ ಇದು ಉತ್ತಮ ಆಯ್ಕೆ.
* ಎರಡು ಸ್ಲೈಸ್ ಗೋಧಿ ಬ್ರೆಡ್ಡಿನಲ್ಲಿ 1.7 ಗ್ರಾಂ ಕಬ್ಬಿಣ, 78 ಮಿ. ಗ್ರಾಂನಷ್ಟು ಪಾಸ್ಫರಸ್ ಇದೆ.
* ಇದಕ್ಕಿಂತಲೂ ಹೆಚ್ಚಾಗಿ, ಗೋಧಿಯ ಬ್ರೆಡ್ಡಿನ ಒಂದು ಸರ್ವಿಂಗ್‌ನಲ್ಲಿ 260 ಮಿ. ಗ್ರಾಂ ಸೋಡಿಯಂ ಇದ್ದು, ದಿನ ಒಂದರಲ್ಲಿ ವ್ಯಕ್ತಿಗೆ ಬೇಕಾಗುವ 11 ಪ್ರತಿಶತದಷ್ಟು ಸೋಡಿಯಂ ಇದರಿಂದ ಲಭಿಸುತ್ತದೆ.
* ಗೋಧಿಯ ಬ್ರೆಡ್ಡಿನಲ್ಲಿ ಅಧಿಕ ಪ್ರಮಾಣದ ವಿಟಮಿನ್ ಬಿ ಗಳಾದ, ರೈಬೋಫ್ಲೇವಿನ್, ಥಿಯಾಮಿನ್ ಮತ್ತು ನಿಯಾಸಿನ್‌ಗಳಿವೆ ಇವೆಲ್ಲವೂ ಸಹ ಚಯಾಪಚಯ ಕ್ರಿಯೆ ಮತ್ತು ಕೆಂಪು ರಕ್ತ ಕಣಗಳ ಉತ್ಪತ್ತಿಗೆ ಅತ್ಯವಶ್ಯಕ.

– ಸಂಗ್ರಹ.

## ಕವನಗಳು:

ನಿಜವಾದ ಸ್ನೇಹಿತ ಯೇಸು
ಲೋಕದ ಪಯಣದಲ್ಲಿ
ಜೀವನದ ದಾರಿಯಲ್ಲಿ
ನೋವಿನ ಸಮಯದಲ್ಲಿ
ದೇವರ ಸನ್ನಿಧಿಯಲ್ಲಿ
ಯೇಸು ಕ್ರಿಸ್ತನಿರುವರು ನನ್ನಲ್ಲಿ

ಮನವೇ ನೀ ಕೊರಗದಿರು
ಸೈತಾನನಿಗೆ ಅವಕಾಶ ಕೊಡದಿರು
ವಾಕ್ಯ (ಸತ್ಯವೇದ)ವನ್ನು ಜ್ಞಾನಿಸುತ್ತಿರು
ಯೇಸುವಿನ ಸ್ತುತಿಗೀತೆ ಹಾಡುತ್ತಿರು
ಯೇಸು ನಿನ್ನಲ್ಲೇ ವಾಸಿಸುವರು.

ಕರ್ತನು ನಿನ್ನ ಮನದಂಗಳದಲ್ಲಿ
ತಳಿರು ತೋರಣ ಕಟ್ಟಿರುವನಲ್ಲಿ
ನೀ ಪಾಪ ಮಾಡದಿರು ಅಲ್ಲಿ
ನೀ ಮರೆಯದಿರು ಯೇಸುಕ್ರಿಸ್ತನಿದ್ದಾರೆ ನಿನ್ನಲ್ಲಿ

ಕನಸಿನ ಗೋಪುರ ಕಟ್ಟಿದೆ ನಾ ಮರಳಲ್ಲಿ
ಕ್ಷಣ ಮಾತ್ರದಲ್ಲಿ ನೆಲ ಸಮವಾಯಿತು ನೀರಲ್ಲಿ
ನಿರಾಶೆಯು ಮುತ್ತಲು ಸಂಕಟವು ಹೆಚ್ಚಿತು ನನ್ನಲ್ಲಿ
ನಾ ಬಳಲಿ ಸೋತು ಹೋದೆನಲ್ಲಿ
ಯಾರಿಗೂ ಬೇಡವಾದೆ ಎಂದೆ ನನ್ನಲ್ಲಿ
ಕರ ಹಿಡಿದು ನನ್ನ ಎತ್ತಲು ಯಾರೆಂದೆನ್ನಲ್ಲಿ
ನಾ ತಲೆ ಎತ್ತಿ ನೋಡಲು ನಿಜ ಪ್ರೀತಿಯ ಕಂಡೆ ಯೇಸುವಲ್ಲಿ
ನನಗಾಗಿ ಪ್ರಾಣ ಕೊಟ್ಟಾತನ ಪಡೆದೆ ಕೊನೆಯಲ್ಲಿ
ನಿಜ ಸ್ನೇಹಿತ ಯೇಸು ಕ್ರಿಸ್ತನಲ್ಲಿ.

**– ಜೋಯ್ಸ್ ಮಲ್ಪೆ.**

**ಮನೆ ಮಾರಾಟಕ್ಕಿದೆ**



**ಶಂಕರಪುರದ ದುರ್ಗನಗರದಲ್ಲಿ 1500 sq.ft. R.C.C ಮನೆ ಸಹಿತ 15 ಸೆಂಟ್ಸ್ ಜಾಗ ಮಾರಾಟಕ್ಕಿದೆ.**

**ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ :**

**08007853167, 09764630343.**

ಧರ್ಮವೇ ನಿನಗೆ ಆಧಾರ; ನೀನು ಹಿಂಸೆಗೆ ದೂರವಾಗಿರುವಿ, ನಿನಗೆ ಹೆದರಿಕೆ ಇರುವುದಿಲ್ಲ, ನಾಶನವು ದೂರವಾಗಿರುವದು, ನಿನ್ನ ಹತ್ತಿರಕ್ಕೆಬಾರದು (ಯೆಶಾ. 54:14).

## ಜಾಹಿರಾತು


ನಿಮಗೆ ಶಾಲೆಯ ಯೂನಿಫಾರಂ ಮತ್ತು ದೇವರ ವಾಕ್ಯದ ಟಿ-ಶರ್ಟ್ ಬೇಕಾದಲ್ಲಿ ನಾವು ಮಾಡಿಕೊಡುತ್ತೇವೆ.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :

**9902334941, 08202002781, 9844265602.**

# ಬೇಕಾಗಿದ್ದಾರೆ

24 ಗಂಟೆ ಪ್ರಾರ್ಥನಾ ಗೋಪುರದಲ್ಲಿ ಪ್ರಾರ್ಥಿಸುವ ಪ್ರಾರ್ಥನಾ ವೀರರು ಬೇಕಾಗಿದ್ದಾರೆ.
ಊಟ, ವಸತಿ ಸೌಕರ್ಯವನ್ನು ನೀಡಲಾಗುವುದು.
ಪ್ರಾರ್ಥನೆ ಮಾಡಲು ಇಚ್ಛಿಸುವವರು

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :

**9902334941**

ನೀವು ನಮ್ಮ ಅನಾಥಾಶ್ರಮದಲ್ಲಿ ಸೇವೆ ಮಾಡಲು ಇಷ್ಟಪಡುವುದಾದರೆ

ನಮ್ಮನ್ನು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :

**9902334941, 08202002781.**


ಯೆಹೋವನು ತಾನೇ ನಿನ್ನ ಮುಂದುಗಡೆ ಹೋಗುವನು; ಆತನೇ ನಿನ್ನ ಸಂಗಡ ಇರುವನು; ನಿನ್ನನ್ನು ಅಪಜಯಕ್ಕೆ ಗುರಿಪಡಿಸುವದೇ ಇಲ್ಲ (ಧರ್ಮೋ. 31:8).

## ಮಕ್ಕಳ ಸ್ವರ

1) "ಮೆಸ್ಸೀಯ" ಎಂಬ ಪದದ ಅರ್ಥವೇನು ?
2) ಯೇಸು ಒಬ್ಬ ಕುರುಡನ ಕಣ್ಣುಗಳಿಗೆ ಕೆಸರನ್ನು ಹಚ್ಚಿ ಯಾವ ಕೊಳದ ಬಳಿ ಹೋಗಿ ತೊಳೆದುಕೋ ಅಂದನು ?
3) ಯೇಸುವಿಗೆ ಮೊಳೆಯೊಡೆದ ಘಾಯಗಳಲ್ಲಿ ಬೆರಳಿಟ್ಟು ನೋಡಿದರೆ ಹೊರತು ನಂಬುವುದಿಲ್ಲ ಎಂದ ಶಿಷ್ಯನು ಯಾರು?
4) ಲೆಮೆಕನ ಹೆಂಡತಿಯರ ಹೆಸರೇನು?
5) ಕಿನ್ನರಿ ಕೊಳಲುಗಳನ್ನು ನುಡಿಸುವವರ ಮೂಲ ಪುರುಷನು ಯಾರು ?
6) ದೇವರೊಂದಿಗೆ ನಡೆದ ಹನೋಕನು ಯಾರ ಮಗನು ?
7) ಯಾಕೋಬನ ಹೆಂಡತಿ ರಾಹೇಲಳು ಯಾವ ಮಗನನ್ನು ಪ್ರಸವಿಸುತ್ತಾ ಮರಣಿಸಿದಳು ?
8) ಉಜ್ಜೀಯ, ಯೆರೂಷಳ ಮಗನು ಯಾರು ?
9) "ರಬ್ಬೂನಿ" ಎಂಬ ಪದದ ಅರ್ಥವೇನು?
10) ಎಸ್ತೇರಳ ಮುಂಚಿನ ಅಥವಾ ಮೊದಲ ಹೆಸರೇನು?

---

### ಸೆಪ್ಟಂಬರ್ ತಿಂಗಳ ಮಕ್ಕಳ ಸ್ವರ ಸಂಚಿಕೆಯ ಉತ್ತರಗಳು :

1) ಮಂಡೇತೆರಿಗೆ (ಅರ್ಧ ರೂಪಾಯಿ) ಮತ್ತಾ. 17:24
2) ಹನನ್ಯ (ದಾನಿ. 61:6–7).
3) ಮೊರ್ದೆಕೈ (ಎಸ್ತೆ. 2:5–7).
4) ಬೆತೂವೇಲನ ಮಗಳು (ಆದಿ. 25:20).
5) ಎಲ್ಲಾಜಾರನು (ಅರ. 20:25).
6) ಬೇತೇಲ್ (ಆದಿ. 27:18).
7) ಆರನೇ ಆಜ್ಞೆ (ವಿಮೋ. 20:13).
8) ಬತ್ಷೆಬೆ (2 ಅರ. 1:11).
9) ಹೋಶೇಯ
10) ಅಚ್ಚಜಟಮಾಂಸಿ ತೈಲ (ಮಾರ್ಕ. 14:3).

---

## ಡಿಜಿಎಮ್ ಬೇತೇಲ್ ಅಂಕಣ

- **ಕರ್ತನ ಕೃಪೆಯಿಂದ ಸಭಾಪಾಲಕರಾದ ಪಾ|| ಸುನಿಲ್ ಜಾನ್ ಡಿ'ಸೋಜಾರವರು ಬಾಂಬೆ ಹಾಗೂ ಬೆಂಗಳೂರು ಪಟ್ಟಣದಲ್ಲಿ ಕರ್ತನ ಸೇವೆಯನ್ನು ಮಾಡಿ ಬಂದಿರುತ್ತಾರೆ.**
- **ಡಿಜಿಎಮ್ ಬೇತೇಲ್ ಸಭೆಯ ವಿಶ್ವಾಸಿಗಳಾದ ಸಹೋ|| ಹೆನ್ರಿಯವರ ಹೆಂಡತಿಯಾದ ಸಹೋ|| ಲವಿ ಮರಿಯಾರವರು ಸೆಪ್ಟಂಬರ್ 11/09/13ರಂದು ಕರ್ತನಲ್ಲಿ ನಿದ್ರೆ ಹೊಂದಿರುತ್ತಾರೆ.**
- **ಡಿಸೆಂಬರ್ 02.12.2013 ರಿಂದ 11.12.2013ರವರೆಗೆ 10 ದಿವಸಗಳ ಕೇರಿತ್ ಶಕ್ತಿಯ ಹಾಗೂ ಬಿಡುಗಡೆಯ ಕೂಟಗಳು ಏರ್ಪಡಿಸಲಾಗಿದೆ.**
- **ನೂತನವಾಗಿ ಕಟ್ಟಲ್ಪಡುತ್ತಿರುವ ಪ್ರಾರ್ಥನಾ ಗೋಪುರಕ್ಕಾಗಿ ಪ್ರಾರ್ಥಿಸಿರಿ.**

ನೀನು ಸಕಲ ಕಾರ್ಯಗಳನ್ನು ನಡಿಸಬಲ್ಲಿಯೆಂತಲೂ ಯಾವ ಸಂಕಲ್ಪವೂ ನಿನಗೆ
ಅಸಾಧ್ಯದಲ್ಲವೆಂತಲೂ ತಿಳಿದುಕೊಂಡೇ ಇದ್ದೇನೆ (ಯೋಬ. 42:2).